# ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್‌ಎನ್‌ಎಸ್ - 19

3ನೇ ವರ್ಷ 30ನೇ ಸಂಚಿಕೆ ಕೊಪ್ಪ 31-3-1985 ಭಾನುವಾರ ಬೆಲೆ 40 ಪೈಸೆ


## ಕೊಪ್ಪದ ಕೋರ್ಟ್: ಮುಂದಿನ ಹೆಜ್ಜೆ

ಕೊಪ್ಪಕ್ಕೆ ಪ್ರಥಮ ದರ್ಜೆ ನ್ಯಾಯಾಲಯ ಬೇಕೆಂಬ ಬೇಡಿಕೆ ಬಗ್ಗೆ ಜಿಲ್ಲಾ ನ್ಯಾಯಾಧೀಶರು ಸ್ಥಳ ಪರಿಶೀಲನೆ ಮತ್ತು ಸ್ಥಳೀಯ ಮುಖಂಡರೊಂದಿಗೆ ಚರ್ಚೆ ನಡೆಸಿ, ಕೋರ್ಟಿಗೆ ಮತ್ತು ನ್ಯಾಯಾಧೀಶರ ವಸತಿಗೆ ಕಟ್ಟಡಗಳನ್ನು ಒದಗಿಸುವ ಬಗ್ಗೆ ತಾ. ಅ. ಮಂಡಳಿಯ ನಿರ್ಣಯಗಳನ್ನು ಪಡೆದುಕೊಂಡು ವಿವರವಾದ ವರದಿಯನ್ನು ರಾಜ್ಯದ ಶ್ರೇಷ್ಠ ನ್ಯಾಯಾಲಯಕ್ಕೆ ಕಳಿಸಿದ್ದಾರೆ. ಅದನ್ನು ಮುಖ್ಯ ನ್ಯಾಯಾಧೀಶರು ಪರಿಶೀಲಿಸಿ ಸರ್ಕಾರಕ್ಕೆ ಶಿಫಾರಸು ಮಾಡಬೇಕಾಗಿದೆ. ಈ ಕೆಲಸ ತ್ವರಿತವಾಗಿ ಆಗಬೇಕಾದಲ್ಲಿ, ಸ್ಥಳೀಯ ಮುಖಂಡರ ನಿಯೋಗ ಹೋಗಿ ಮುಖ್ಯ ನ್ಯಾಯಾಧೀಶರನ್ನು ಕಂಡು ಈ ವಿಷಯ ಅವರ ಗಮನಕ್ಕೆ ತರುವುದಲ್ಲದೆ, ಶೃಂಗೇರಿ, ಕೊಪ್ಪ ತಾಲೂಕಿನ ಮೂಲೆಯ ಹಳ್ಳಿಗರ ಜನರ ಸೌಕರ್ಯದ ದೃಷ್ಟಿಯಿಂದ ಕೊಪ್ಪದಲ್ಲೊಂದು ಕೋರ್ಟ್ ಸ್ಥಾಪನೆಯ ಅಗತ್ಯವನ್ನು ಅವರಿಗೆ ಮನವರಿಕೆ ಮಾಡಿಕೊಡುವುದು ಅಪೇಕ್ಷಣೀಯ.

### ಸಕಲೇಶಪುರ ಏಲಕ್ಕಿ ಧಾರಣೆ

| ವ್ಯಾಪಾರದ ತಾರೀಕು | ಗರಿಷ್ಠ ಧಾರಣೆ | ಸರಾಸರಿ ಧಾರಣೆ |
|---|---|---|
| 19.3.85 | 275 | 202 |
| 20.3.85 | 310 | 182 |
| 21.3.85 | 295 | 149 |
| 22.3.85 | 311 | 194 |

ಈ ವಾರ ಮಾರುಕಟ್ಟೆಯಲ್ಲಿ ಧಾರಣೆ ವಾಸಿ ಹೆಚ್ಚೂ ಕಡಿಮೆ ಸ್ಥಿರವಾಗಿತ್ತು. ವ್ಯಾಪಾರ ಸಾಧಾರಣವಾಗಿತ್ತು.

### ಶಿವಮೊಗ್ಗ ಅಡಿಕೆ ಪೇಟೆ

ತಾರೀಕು : 25-3-1985

ಸರಕು: 2680 - 3014

ಬೆಟ್ಟೆ: 1980 - 2337

ಗೊರಬಲು: 1501 - 1930

### ಕ್ಷೇತ್ರದಲ್ಲಿ 178 ಕಿಲೋಮೀಟರ್ ಗ್ರಾಮಾಂತರ ರಸ್ತೆ

## ಲೋ|| ಇಲಾಖೆಗೆ ಸೇರ್ಪಡೆ

ಕೊಪ್ಪ: ಕಳೆದೆರಡು ವರ್ಷಗಳಲ್ಲಿ ಶೃಂಗೇರಿ ಕ್ಷೇತ್ರದಲ್ಲಿ ತಾ.ಅ ಮಂಡಳಿಗಳು ಮತ್ತು ಪಂಚಾಯ್ತಿಗಳಿಗೆ ಸೇರಿದ ಒಟ್ಟು 178 ಕಿ. ಮೀ. ಸಪ್ಪು ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಗೆ ಸೇರ್ಪಡೆ ಮಾಡಿಸಿದ್ದು, ಇದರಿಂದ ಆ ರಸ್ತೆಗಳ ದುರಸ್ತಿ ಮತ್ತು ಸಂರಕ್ಷಣೆಗೆ ಬಹಳ ಸಹಾಯಕವಾಗುವುದೆಂದು ಮಂತ್ರಿ ಗೋವಿಂದಗೌಡ ತಿಳಿಸಿದ್ದಾರೆ

ಮಾ.22 ರಂದು ಇಲ್ಲಿ ತನ್ನ ಅಭಿನಂದನಾ ಸಮಾರಂಭದಲ್ಲಿ ಈ ವಿಷಯ ತಿಳಿಸಿದ ಅವರು ಈ ಪ್ರಮಾಣ ಸ್ವಾತಂತ್ರ್ಯ ಬಂದೀಚೆಗಿನ ಒಟ್ಟು ಪ್ರಮಾಣಕ್ಕಿಂತ ಹೆಚ್ಚು ಎಂದರು.

ಕ್ಷೇತ್ರಕ್ಕೆ 9 ಸೇತುವೆಗಳು, 13 ಕಾಲು ಸೇತುವೆಗಳು ಈ ಅವಧಿಯಲ್ಲಿ ಮಂಜೂರಾಗಿದ್ದು, ಕೆಲಸ ಆರಂಭವಾಗಬೇಕಾಗಿದೆ ಎಂದ ಅವರು, ಇದಲ್ಲದೆ 3 ಪ್ರೌಢಶಾಲೆಗಳು ಮತ್ತು 3 ಸರ್ಕಾರಿ ಆಸ್ಪತ್ರೆಗಳು (ಪ್ರಾ. ಆ. ಘಟಕಗಳು)ನ್ನೂ ಸ್ಥಾಪಿಸಲ್ಪಟ್ಟವೆ ಎಂದರು

ತಮ್ಮ ಸರ್ಕಾರ ರಾಜ್ಯದಲ್ಲಿ ಕಳ್ಳಹಣ, ಕಳ್ಳಸಾಗಣೆ, ಲಂಚ, ಗೂಂಡಾಗಿರಿ ಇವುಗಳನ್ನು ನಿರ್ಮೂಲೋತ್ಪಾಟನೆ ಮಾಡಲು ದೃಢ ಸಂಕಲ್ಪ ಮಾಡಿದ್ದು, ತಾನೂ ಕೂಡ ಇದೇ ಧ್ಯೇಯದ ಬೆನ್ನು ಹತ್ತಿರುವುದಾಗಿ ತಿಳಿಸಿದರು

### ಮದುವೆಯ ಹಿಂದಿನ ದಿನ ವರ ನಾಪತ್ತೆ:

## ಬದಲಿ ವ್ಯವಸ್ಥೆಯಲ್ಲಿ ಜೋಡಿ ಮದುವೆ

(ವರದಿ: ಕಲಬಿ ಶ್ರೀನಿವಾಸ್.)

ಆಗಳಗಂಡಿ: ಇಲ್ಲಿಗೆ ಸಮೀಪದ ಮೂರೊಳ್ಳಿ ಎಂಬಲ್ಲಿನ ವಧುವೊಬ್ಬಳಿಗೆ ಶೃಂಗೇರಿ ತಾಲ್ಲೂಕಿನ ಹಳ್ಳಿಯೊಂದರ ವರನೊಂದಿಗೆ ಮದುವೆ ನಿಶ್ಚಿತವಾಗಿ ಸಿದ್ಧತೆ ನಡೆಯುತ್ತಿದ್ದಾಗ, ಮದುವೆಯ ಹಿಂದಿನ ದಿನ ವರನ ತಂದೆ ಬಂದು ವರ ನಾಪತ್ತೆಯಾಗಿರುವುದಾಗಿ ಕಣ್ಣೀರಿಡುತ್ತ ತಿಳಿಸಿದರು. ಮದುವೆಯ ಸಂಭ್ರಮದಲ್ಲಿದ್ದ ಮನೆ ಕಂಗೆಟ್ಟಿತು.

ಆಗ ಕೆಲವು ಮಂದಿ ಚಾಣಾಕ್ಷಮತಿಗಳಾದ ಸೆಂಟರಿಸ್ಟರು ರಾತ್ರೋರಾತ್ರಿ ಬೇರೊಂದು ಊರಿನ ಪರಿಚಿತರೊಬ್ಬರ ಮನೆಗೆ ಹೋಗಿ ಸಮಸ್ಯೆ ವಿವರಿಸಿ ಮಾತುಕತೆ ನಡೆಸಿದಾಗ ಆ ಮನೆಯವರ ಮತ್ತು ಈ ವಧುವಿನ ಮನೆಯವರ ನಡುವೆ "ಒಂದು ಕೊಟ್ಟು ಒಂದು ತರುವ" ಸಾಟಿ ಮದುವೆ ನಡೆದು ಪ್ರಸಂಗ ಸುಖಾಂತ್ಯಗೊಂಡಿತು.

### ಭದ್ರಾ ಮೇಲ್ದಂಡೆ ಯೋಜನೆ ಕೈಬಿಡುವಂತೆ ಮು. ಮಂತ್ರಿಗೆ ಗೋವಿಂದಗೌಡರ ಮನವರಿಕೆ

ಚಿಕ್ಕಮಗಳೂರು: ಭದ್ರಾ ಮೇಲ್ದಂಡೆ ಯೋಜನೆ ಕಾರ್ಯಗತವಾದರೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಅಪಾರ ಹಾನಿಯಾಗುವುದಲ್ಲದೆ ಈಗಿರುವ ಭದ್ರಾ ಜಲಾಶಯಕ್ಕೂ ಧಕ್ಕೆಯಾಗುವುದರಿಂದ ಈ ಯೋಜನೆಯನ್ನು ಕೈಗೆತ್ತಿಕೊಳ್ಳದಂತೆ ಮುಖ್ಯಮಂತ್ರಿಗಳಿಗೆ ತಾನು ಮನವರಿಕೆ ಮಾಡಿರುವುದಾಗಿ ಗೋವಿಂದ ಗೌಡರು ತಿಳಿಸಿದ್ದಾರೆ.

## ಮೇಸ್ಟ್ರು-ಛಡಿ

ಗೋವಿಂದ ಗೌಡರಿಗೆ ಪ್ರಾಥಮಿಕ ಶಿಕ್ಷಣ ಇಲಾಖೆ ಕೊಟ್ಟ ಬಗ್ಗೆ ಅವರ ವಿರೋಧಿಗಳ್ಯಾರೋ-" ಹೆಡ್ಮೇಸ್ಟ್ರು ಹೆಗಡೆಯೋರು ಇವರಿಗೆ ಮೇಸ್ಟ್ರ ಕೆಲಸ ಕೊಟ್ಟಿದ್ದಾರೆ" ಎಂದು ಕುಹಕವಾಡಿದರಂತೆ.

ಇದಕ್ಕೆ ಗೌಡರ ಸ್ನೇಹಿತರೊಬ್ಬರ ಪ್ರತಿಕ್ರಿಯೆ ಹೀಗಿತ್ತು.—

"ಹೌದು ಸ್ವಾಮಿ, ಇಲ್ಲೆಲ್ಲಾ ಬರೀ ಮೂರ್ಖರು, ಅವಿದ್ಯಾವಂತರು, ಅಜ್ಞಾನಿಗಳೇ ತುಂಬಿದ್ದಾರೆ. ಅವರಿಗೆಲ್ಲ ಒಂದಿಷ್ಟು ವಿದ್ಯಾ-ಬುದ್ಧಿ ಕಲಿಸಬೇಕಾದರೆ ಗೋವಿಂದ ಗೌಡರಂಥ ದಕ್ಷರಾದ ಒಬ್ಬ ಮೇಸ್ಟರ ಅಗತ್ಯ ತುಂಬಾ ಇತ್ತು.

ಅಷ್ಟೇ ಅಲ್ಲ. ಇಲ್ಲಿ ಕೆಲವು (ವಿರೋಧ ಪಕ್ಷದ ಹೆಸರು ಹೇಳಿ) ಕಿಡಿಗೇಡಿಗಳು ಬಹಳ ತುಡುಗು ಮಾಡ್ತವೆ. ಬರಿ ಮಾತಿಗೆಲ್ಲ ಬಗ್ಗೋದಿಲ್ಲ. ಅವಕ್ಕೆ ಛಡೀನೇ ಬೇಕು. ಅದ್ದರಿಂದ ಮೇಸ್ಟ್ರೇ, ಹೆಡ್ಮೇಸ್ಟ್ರೇ ಬೇಕಾದರೆ ಒಂದು ಛಡೀನೂ ಕೇಳಿ ಕೊಳ್ಳಿ!"

(ಮೇಸ್ಟ್ರು ಮನೆಯ ಕೆಲವು ಹುಡುಗರದೂ ತುಡುಗು ಜಾಸ್ತಿಯಾಗುವುದಿದೆ. ಅವುಗಳ ಮೇಲೂ ಈ ಛಡಿ ಬಿಡಿಸಲು ಮೇಸ್ಟ್ರು ಹಿಂದೇಟು ಹಾಕದಿರಲಿ!)

### ಸ್ವಉದ್ಯೋಗ ಯೋಜನೆ: ಬ್ಯಾಂಕ್ ಅಧಿಕಾರಿಗಳ ಅಸಹಕಾರಕ್ಕೆ ಸಿಪಿಐ ಖಂಡನೆ

ಚಿಕ್ಕಮಗಳೂರು: ಸ್ವಯಂ ಉದ್ಯೋಗ ಯೋಜನೆ ಹಾಗೂ ಐ. ಆರ್. ಡಿ. ಪಿ. ಮತ್ತಿತರ ದುರ್ಬಲ ವರ್ಗಗಳವರ ಸಾಲ ಯೋಜನೆಗಳಲ್ಲಿ ಸಂಬಂಧಪಟ್ಟ ಇಲಾಖೆಗಳು ಶಿಫಾರ್ಸು ಮಾಡಿದ್ದರೂ ಬ್ಯಾಂಕ್ ಅಧಿಕಾರಿಗಳು ಇಲ್ಲ ಸಲ್ಲದ ತಾಂತ್ರಿಕ ಸಬೂಬುಗಳನ್ನು ಹೇಳಿ ಸಾಲ ನೀಡುವಲ್ಲಿ ಸತಾಯಿಸುವುದನ್ನು ಸಿ. ಪಿ. ಐ. ಜಿಲ್ಲಾ ಕಾರ್ಯದರ್ಶಿ ಬಿ. ಕೆ. ಸುಂದರೇಶ್ ಖಂಡಿಸಿದ್ದಾರೆ. ಸರಳ ನಿಯಮಗಳನ್ನು ವಿಧಿಸಿ, ಅದರ ಪ್ರಕಾರ ಎಲ್ಲಾ ನ್ಯಾಯಯುತ ಸಾಲದ ಅರ್ಜಿಗಳನ್ನೂ ಕೂಡಲೇ ಮಂಜೂರು ಮಾಡಬೇಕೆಂದು ಅವರು ಒತ್ತಾಯಿಸಿದ್ದಾರೆ.

ಕೊಪ್ಪ: ಇಲ್ಲಿನ ಗುತ್ತಿ ದೇವಸ್ಥಾನದ ರಥೋತ್ಸವ ಮಾ. 26ರಂದು ಹಾಗೂ ಅಂದಗಾರಿನ ರಥೋತ್ಸವ ಮಾ. 30ರಂದು ವಿಜೃಂಭಣೆಯಿಂದ ನಡೆದವು.

ಏ. 5ರಂದು ಕೊಪ್ಪದ ವೀರಭದ್ರದೇವಸ್ಥಾನದಲ್ಲಿ ಮತ್ತು ಕಾಚಕಲ್ ಸಮೀಪದ ಗಬ್ಗಾನೆ ಪಂಚಲಿಂಗೇಶ್ವರ ದೇವಸ್ಥಾನದಲ್ಲಿ ರಥೋತ್ಸವಗಳು ನಡೆಯುತ್ತವೆ.

## ರಾಜ್ಯದಲ್ಲೇ ಪ್ರಥಮ ಸಣ್ಣ ವಿದ್ಯುತ್ ಜನಕ

ಚಿಕ್ಕಮಗಳೂರು: ವಿದ್ಯುತ್ ಸಂಪರ್ಕವಿಲ್ಲದ ಗ್ರಾಮಗಳಿಗೆ ಸ್ಥಳೀಯವಾಗಿಯೇ ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿ ವಿದ್ಯುತ್ ಒದಗಿಸುವ ಪ್ರಯೋಗವನ್ನು ರಾಜ್ಯದಲ್ಲೇ ಪ್ರಥಮವಾಗಿ ಚಿಕ್ಕಮಗಳೂರು ವಿದ್ಯುಚ್ಛಕ್ತಿ ಮಂಡಳಿ ಮಾಡಿದೆ.

ಜಿಲ್ಲೆಯ ಕಳಸ ಬಳಿ ಇರುವ ಎಳನೀರು ಗ್ರಾಮದ ೨೫ ಮನೆಗಳಿಗೆ ಹಾಗೂ ಬೀದಿ ದೀಪಕ್ಕೆ ವಿದ್ಯುಚ್ಛಕ್ತಿ ಕಲ್ಪಿಸಲು ಅಲ್ಲೊಂದು ಸಣ್ಣ ವಿದ್ಯುತ್ ಜನಕ ಸ್ಥಾಪಿಸಲಾಗಿದೆ. ೨ ಲಕ್ಷ ೩೦ ಸಾವಿರ ರೂ. ವೆಚ್ಚದಲ್ಲಿ ಸ್ಥಾಪಿಸಿರುವ ಈ ವಿದ್ಯುತ್ ಜನಕದಿಂದ ೨೫ ಕಿಲೋ ವ್ಯಾಟ್ ವಿದ್ಯುತ್ ಉತ್ಪಾದನೆಯಾಗಲಿದೆ.

ಮುಂದಿನ ದಿನಗಳಲ್ಲಿ ವಿದ್ಯುತ್ ಜನಕ ಸ್ಥಾಪಿಸಲು ಇನ್ನೂ [illegible] ಸ್ಥಳ [illegible] ಒಂದು [illegible] ವಿದ್ಯುತ್ ಉತ್ಪಾದಿಸಲು ಸಾಧ್ಯವಿದೆ ಎಂದು ವಿದ್ಯುಚ್ಛಕ್ತಿ ಮಂಡಳಿ ಕಾರ್ಯಪಾಲಕ ಅಭಿಯಂತರರಾದ [illegible] ತಿಳಿಸಿದ್ದಾರೆ. ಇಂಥ ಕಿರು ವಿದ್ಯುತ್ ಜನಕಗಳನ್ನು ಸ್ಥಾಪಿಸುವುದಾದರೆ ಮಲೆನಾಡಿನಲ್ಲಿ [illegible] ಸ್ಥಳಗಳು ಸಿಗುತ್ತವೆ.

### ಶೃಂಗೇರಿಯ ಕಲಾವಿದನಿಗೆ ಬೆಂಗಳೂರಲ್ಲಿ ಸಂದ ಸನ್ಮಾನ

(ರಮೇಶ್ ಎಸ್ಬಿ. ಬೇಗಾರು)

ಶೃಂಗೇರಿ: ಸಂಗೀತ ಕ್ಷೇತ್ರದಲ್ಲಿ ಬಹಳ ಹೆಸರು ಮಾಡಿರುವ ಶೃಂಗೇರಿಯ ವಿದ್ಯಾರಣ್ಯಪುರದ ಲಕ್ಷ್ಮಣಶಾಸ್ತ್ರಿಯವರನ್ನು ಇತ್ತೀಚೆಗೆ ಬೆಂಗಳೂರಿನ ಗಾಯನ ಸಮಾಜದಲ್ಲಿ ಸಚಿವ ಜೀವರಾಜ ಆಳ್ವ ಇವರ ಅಧ್ಯಕ್ಷತೆಯಲ್ಲಿ ಸನ್ಮಾನಿಸಲಾಯಿತು. ಶೃಂಗೇರಿಯ ಕಲಾವಿದರೊಬ್ಬರಿಗೆ ಈ ಗಾತ್ರದ ಸನ್ಮಾನ ದೊರಕುತ್ತಿರುವುದು ಇದೇ ಮೊದಲ ಸಲ ಎನ್ನಲಾಗಿದೆ. ಶ್ರೀಯುತರು ಬಹಳ ಸಮಯದಿಂದ ಬೆಂಗಳೂರಿನ ಆಕಾಶವಾಣಿ ಕಲಾವಿದರಾಗಿದ್ದು, ಬೆಂಗಳೂರಿನಲ್ಲೇ ನೆಲೆಸಿದ್ದಾರೆ. ಈ ಸನ್ಮಾನ ಮಲೆನಾಡಿನವರಿಗೆಲ್ಲಾ ಹೆಮ್ಮೆಯ ವಿಷಯವಾಗಿದೆ.

### ಕೊಪ್ಪ ತಾ|| ಸರ್ವೆಯರ್

## ಅಮಾನತು

ಕೊಪ್ಪ: ಇಲ್ಲಿನ ತಾಲ್ಲೂಕು ಸರ್ವೆಯರ್ ಪುಟ್ಟಸ್ವಾಮಿ ಅವರನ್ನು ಲಂಚ ಕೇಳಿದ ಆಪಾದನೆಯ ಮೇಲೆ ಜಿಲ್ಲಾಧಿಕಾರಿಗಳು ಅಮಾನತಿನಲ್ಲಿಟ್ಟಿದ್ದಾರೆ.

ಇವರು ಜಯಪುರದ ಬಳಿಯ ಹಳ್ಳಿಯ ಬದರಿನಾರಾಯಣ್ ಎಂಬುವರ ಹತ್ತಿರ ಲಂಚ ಕೇಳಿದ್ದಲ್ಲದೆ, ಅಸಭ್ಯವಾಗಿ ವರ್ತಿಸಿದರೆಂದು ನೀಡಲಾಗಿದ್ದ ದೂರಿನನ್ವಯ ಜಿಲ್ಲಾಧಿಕಾರಿಗಳು ಕೊಪ್ಪ ತಹಸೀಲ್ದಾರರಿಗೆ ಪೂರ್ವಭಾವಿ ತನಿಖೆಗೆ ಆದೇಶಿಸಿದ್ದರು. ಅವರ ವರದಿಯನ್ನಾಧರಿಸಿ ಈ ನೌಕರನನ್ನು ಅಮಾನತುಗೊಳಿಸಿದ್ದು, ಮುಂದಿನ ತನಿಖೆಯನ್ನು ಚಿಕ್ಕಮಗಳೂರಿನ ಕಂದಾಯ ಉಪ ವಿಭಾಗಾಧಿಕಾರಿ ಗೋವಿಂದಪ್ಪ ಅವರಿಗೆ ವಹಿಸಿದ್ದಾರೆಂದು ತಿಳಿದುಬಂದಿದೆ.

### ಕೊಪ್ಪದಲ್ಲಿ ಏಲಕ್ಕಿ ಬೆಳೆ ಕುರಿತ ಉಪಯುಕ್ತ ವಿಚಾರ ಗೋಷ್ಠಿ:

# ಬೆಳೆಗಾರರ ಆಕ್ರೋಶಕ್ಕೆ ಗುರಿಯಾದ ಏಲಕ್ಕಿ ವ್ಯಾಪಾರ ನಿಗಮ

**ಸಮೀಕ್ಷೆ: ಹೆಗ್ಗಾರು ಜಯಂತ್**

**ಏಲಕ್ಕಿ ಮಂಡಳಿಯು ಆಶ್ರಯದಲ್ಲಿ ಮಾರ್ಚ್ 18ರಂದು ಕೊಪ್ಪದಲ್ಲಿ ನಡೆದ ಏಲಕ್ಕಿ ಬೆಳೆ ವಿಚಾರ ಗೋಷ್ಠಿಯಲ್ಲಿ ಏಲಕ್ಕಿ ವ್ಯಾಪಾರ ನಿಗಮ (ಕಾರ್ಡಮಮ್ ಟ್ರೇಡಿಂಗ್ ಕಾರ್ಪೊರೇಶನ್ - ಸಿ.ಟಿ.ಸಿ.) ಏಲಕ್ಕಿ ಬೆಳೆಗಾರರ ತೀವ್ರ ಆಕ್ರೋಶ, ಆಪಾದನೆಗಳಿಗೆ ಗುರಿಯಾಯಿತು.**

ಮಾಜಿ ಎಂಪಿ ಮತ್ತು ಏಲಕ್ಕಿ ಮಂಡಳಿ ಸದಸ್ಯ ಡಿ.ಎಂ.ಪುಟ್ಟೇಗೌಡ ಹಾಗೂ ಅವರ ಬದಲಿಗೆ ಅಧ್ಯಕ್ಷತೆ ವಹಿಸಿದ್ದ ಸಹ್ಯಾದ್ರಿ ಬೆಳೆಗಾರರ ಸಂಘದ ಅಧ್ಯಕ್ಷ ಪಿ. ಜಿ. ಗುರ್ಜರ್ ಇವರಿಬ್ಬರೂ ಆದಷ್ಟೂ ಬೆಳೆಗಾರರ ಸಮಸ್ಯೆಗಳನ್ನು ಮಂಡಳಿಯ ಮತ್ತು ಸರ್ಕಾರದ ಗಮನಕ್ಕೆ ತರುವಲ್ಲಿ ಹೆಚ್ಚಿನ ಶ್ರದ್ಧೆ ವಹಿಸಿದರು.

### ಹೆಚ್ಚಿದ ವಿದೇಶೀ ಸ್ಪರ್ಧೆ/ಪೈಪೋಟಿ

ಏಲಕ್ಕಿ ಮಂಡಳಿಯ ಅಧ್ಯಕ್ಷ ಮೋಹನ ಚಂದ್ರನ್ ಮಾತನಾಡಿ, ಈ ವರ್ಷ 4500 ಟನ್ ಬೆಳೆ ನಿರೀಕ್ಷಿಸಲಾಗಿದ್ದು 55 ಕೋಟಿ ರೂ. ವಿದೇಶಿ ವಿನಿಮಯ ಸಿಗಲಿದೆ ಎಂದರು.

ನಮ್ಮ ದೇಶದಲ್ಲಿ ಪ್ರತಿ ಹೆಕ್ಟೇರ್ ಭೂಮಿಗೆ ಸರಾಸರಿ 62 ಕಿಲೋ ಏಲಕ್ಕಿ ಬೆಳೆಯುತ್ತಿದೆ. ಗ್ವಾಟೆಮಾಲಾ ದೇಶದಲ್ಲಿ 250 ಕಿಲೋ ಬೆಳೆಯುತ್ತಿದೆ. ನೈಸರ್ಗಿಕ ಅನುಕೂಲತೆ ಮತ್ತು ಉತ್ತಮ ಕೃಷಿ ಪದ್ಧತಿಗಳಿಂದಾಗಿ ಅಲ್ಲಿ ಇದು ಸಾಧ್ಯವಾಗಿದೆ. ಹೀಗಾಗಿ, ಈಗ ವಿಶ್ವ ಮಾರುಕಟ್ಟೆ ಬೇಡಿಕೆಯ 45 ಭಾಗ ಏಲಕ್ಕಿಯನ್ನು ಪೂರೈಸುತ್ತಿರುವ ನಮಗೆ ಆ ದೇಶ ತೀವ್ರ ಪೈಪೋಟಿ ಒಡ್ಡುತ್ತಿದೆ ಎಂದು ಅವರು ಹೇಳಿದರು.

ಅಲ್ಲಿ ಪ್ರತಿ 7ರಿಂದ 10 ವರ್ಷಕ್ಕೊಮ್ಮೆ ಗಿಡಗಳನ್ನು ಪೂರ್ತಿಯಾಗಿ ಮರು ನೆಡುತ್ತಾರೆ. ಹೊಸ ಗಿಡಗಳಿಂದ ಹಳೆಯ ಗಿಡಗಳಿಗಿಂತ ಖಂಡಿತವಾಗಿಯೂ ಹೆಚ್ಚಿನ ಇಳುವರಿ ಪಡೆಯಬಹುದು. ನಮ್ಮ ದೇಶದಲ್ಲಿ ಈ ಕ್ರಮ ಇನ್ನೂ ಬರಬೇಕಾಗಿದೆ. ಆದರೆ ಅಲ್ಲಿಗಿಂತ ನಮ್ಮ ಏಲಕ್ಕಿ ಉತ್ತಮ ದರ್ಜೆಯದ್ದಾಗಿದೆ ಎಂದ ಮೋಹನಚಂದ್ರನ್, ಈಗ ಗಿಡ ಮರು ನೆಡುವಿಕೆಗೆ 10 ಸಾವಿರ ರೂ. ಸಾಲ ಮತ್ತು 2500 ರೂ. ಸಹಾಯ ಧನ ನೀಡಲಾಗುತ್ತಿದೆ. ಆದರೆ ಈ ಬಾರಿ ವರ್ಷಗಳಲ್ಲಿ ಬೇಸಾಯದ ಖರ್ಚು ಹೆಚ್ಚಿರುವುದರಿಂದ ಈ ಮೊತ್ತವನ್ನು 15 ಸಾವಿರ ರೂ. ಗೆ ಮತ್ತು ಸಬ್ಸಿಡಿಯನ್ನು ಕ್ರಮೇಣ ಶೇ. 25ಕ್ಕೆ ಏರಿಸಲಾಗುವುದೆಂದರು. ಸಬ್ಸಿಡಿ ಯೋಜನೆಯಲ್ಲಿ ನೀರಾವರಿ ಪಂಪ್ ಸೆಟ್ಟಿಗೂ ಅವಕಾಶವಿದೆ. 7ನೇ ಯೋಜನೆಯಲ್ಲಿ 23 ಕೋಟಿ ರೂ ಯೋಜನೆ ಸಿದ್ಧವಾಗಿದ್ದು ಅದರಲ್ಲಿ ನೀರಾವರಿ ಬಾವಿ ಮತ್ತು ಟ್ಯಾಂಕ್‌ಗಳನ್ನು ಕಟ್ಟಲೂ ಸಬ್ಸಿಡಿ ನೀಡಲಾಗುವುದೆಂದರು.

### ಇಂಗ್ಲಿಷ್‌ಮಯ

ಗೋಷ್ಠಿಯಲ್ಲಿ ಹೆಚ್ಚಿನ ಜನರು ಇಂಗ್ಲಿಷಿನಲ್ಲಿ ಮಾತಾಡಿದ್ದರಿಂದ ಬಹಳ ಜನರಿಗೆ ತೊಂದರೆಯಾಯಿತು. ಇಲಾಖೆಯವರೂ ಕೂಡ ಯಾರೂ ಇದರ ತರ್ಜುಮೆಗೆ ಮುಂದಾಗದಿದ್ದು, ಸಭಾಧ್ಯಕ್ಷ ಗುರ್ಜರ್‌ರವರೇ ಪ್ರತಿ ಸಲವೂ ಭಾಷಣದ ಮುಖ್ಯಾಂಶಗಳನ್ನು ತರ್ಜುಮೆ ಮಾಡಿದರು. ಕೆಲವರು ಕನ್ನಡ ಗೊತ್ತಿದ್ದೂ ಇಂಗ್ಲಿಷ್ ಮಾತಾಡಿ, ಜನರ ನಿಂದೆಗೆ ಗುರಿಯಾದರೆ, ಹಲವು ಸಲ ಕೆಲ ಬೆಳೆಗಾರರೇ ಇಂಗ್ಲಿಷ್ ಕೊಚ್ಚಿ ಅವರುಗಳನ್ನೂ ಇಂಗ್ಲೀಷಿಗೆಳೆಯುತ್ತಿದ್ದರು.

### ಏಲಕ್ಕಿ ವ್ಯಾಪಾರ ನಿಗಮ

ಸಭೆಗೆ ತಡವಾಗಿ ಬಂದರೂ ರೈತರ ಗಮನ ಸೆಳೆದ ಡಿ.ಎಂ.ಪುಟ್ಟೇಗೌಡ, ಏಲಕ್ಕಿ ಬೆಳೆಗಾರರ ಹಿತದೃಷ್ಟಿಯಿಂದ ಪ್ರಾರಂಭಿಸಲಾದ ಏಲಕ್ಕಿ ವ್ಯಾಪಾರ ನಿಗಮ ಬಹಳ ಬೇಜವಾಬ್ದಾರಿಯಿಂದ ಹಾಗೇ ಕೂತುಕೊಂಡಿದೆ. ಅದರ ಅಧ್ಯಕ್ಷರು ಇಂದು ಹಾಜರಾಗದೆ ಇನ್ನಷ್ಟು ಬೇಜವಾಬ್ದಾರಿ ಪ್ರದರ್ಶಿಸಿದ್ದಾರೆ ಎಂದರು.

ಕೇರಳದಲ್ಲಿ ರೈತರೇ ಏಲಕ್ಕಿ ಕೊಂಡು ವಿದೇಶಕ್ಕೂ ಮಾರಾಟ ಮಾಡಿ ತಮ್ಮದೇ ಆದ ಜಾಲವನ್ನು ಬಲಪಡಿಸಿಕೊಂಡಿದ್ದಾರೆ. ಆದ್ದರಿಂದ ಅವರು ಪೂಲ್-ಡಿಪೋ ಮಾದರಿ ಮಾರುಕಟ್ಟೆಯನ್ನು ಅಪೇಕ್ಷೆ ಪಡುವುದಿಲ್ಲ. ಈ ನಿಗಮವನ್ನು ಮುಖ್ಯವಾಗಿ ಕರ್ನಾಟಕದ ಬೆಳೆಗಾರರ ಹಿತ ರಕ್ಷಣೆಗಾಗಿಯೇ 50 ಲಕ್ಷ ರೂ. ಬಂಡವಾಳದೊಂದಿಗೆ ಆರಂಭಿಸಿದ್ದು. ಆದರೆ ಇದರ ಅಧಿಕಾರಿಗಳು ಕೇರಳಕ್ಕೆ ಹೋಗಿ 10 ಟನ್ ಏಲಕ್ಕಿಯನ್ನು ಹೆಚ್ಚಿನ ಧಾರಣೆಯಲ್ಲಿ ಕೊಂಡುಕೊಂಡರು. ಆದರಿಂದ ಯಾವ ಪ್ರಯೋಜನವೂ ಆಗಲಿಲ್ಲ.

ಈ ನಿಗಮದಲ್ಲಿ ರೈತ ಪ್ರತಿನಿಧಿಗಳಿಲ್ಲ. ಅಧಿಕಾರಿಗಳಿಗೆ ಅನುಭವ ಕಡಿಮೆ. ಜೊತೆಗೆ ಬೆಲೆ ಏರಿದ್ದಾಗ ಏಲಕ್ಕಿ ಕೊಳ್ಳುವ ಬೇಜವಾಬ್ದಾರಿತನ ಮತ್ತು ವಿವೇಚನೆಯ ಕೊರತೆ. ಇವೆಲ್ಲದರಿಂದಾಗಿ ಈ ನಿಗಮ ಸಂಪೂರ್ಣ ನಿರುಪಯುಕ್ತವಾಗಿದೆ. ಈಗಿನ ಸರ್ಕಾರ ಮತ್ತು ಈ ಪ್ರದೇಶಗಳ ಚುನಾಯಿತ ಪ್ರತಿನಿಧಿಗಳು ಈ ಬಗ್ಗೆ ಹೆಚ್ಚು ಗಮನ ಹರಿಸಬೇಕು ಎಂದು ಪುಟ್ಟೇಗೌಡ ಒತ್ತಾಯಿಸಿದರು.

(ಉದಾಹರಣೆಗೆ, ಅಡಿಕೆ ಧಾರಣೆ ಕಮ್ಮಿಯಾದಾಗ 'ಕ್ಯಾಂಪ್ಕೊ'ದವರು ಕೊಳ್ಳುವಂತೆ, ಈ ನಿಗಮ ಏಲಕ್ಕಿ ಬೆಳೆ ಕುಸಿದಾಗ ಒಂದು ನಿಗದಿಯಾದ ಬೆಲೆಗೆ ಕೊಳ್ಳಬೇಕು. ಈಗಿನ ಧಾರಣೆಯಲ್ಲಿ ಈ ಸಂಸ್ಥೆಯಲ್ಲಿರುವ ಹಣ ಕೂಡ ಕಮ್ಮಿಯಾಗುತ್ತದೆ. ಕನಿಷ್ಠ 10 ಕೋಟಿ ರೂ.ಗಳನ್ನಾದರೂ ಕೊಟ್ಟು, ರೈತ ಪ್ರತಿನಿಧಿಗಳು ಇರುವಂತೆ ಮಾಡಿದರೆ, ಕ್ಯಾಂಪ್ಕೋದಂತೆ ಇದೂ ಕೂಡ ಬೆಲೆಯ ಮಟ್ಟ ಕಾಪಾಡಿಕೊಂಡು ಬರಬಹುದು.)

ನಿಗಮದ ಕಡೆಯಿಂದ ಬಂದಿದ್ದ ಮುನಿರಾಜು ಅವರು, ನಿಗಮದ ಆರಂಭದಲ್ಲಿ ಸಿಬ್ಬಂದಿಯಿಲ್ಲದ್ದು, ಅನುಭವದ ಕೊರತೆ ಮುಂತಾದ ಹಲವು 'ಸಮಸ್ಯೆ'ಗಳನ್ನು ತೋಡಿಕೊಂಡರೂ ಇವು ಬೆಳೆಗಾರರಿಗೆ ಸೂಕ್ತವಾಗಿ ತೋರಲಿಲ್ಲ. ಬೆಳೆಗಾರರ ಆಕ್ಷೇಪ ಮತ್ತು ಸಲಹೆಗಳನ್ನು ನಿಗಮದ ಪರಿಷ್ಕರ ಮತ್ತು ಸರ್ಕಾರದ ಗಮನಕ್ಕೆ ತರುವುದಾಗಿ ತಿಳಿಸಿದರು.

(ಯಾವುದೇ ಘನೋದ್ದೇಶದ ಸಂಸ್ಥೆ ಇಂಥ ಸಬೂಬುಗಳನ್ನೆಲ್ಲ ಹೇಳುವ ಪರಿಸ್ಥಿತಿಯೇ ಬರಬಾರದು. ಇಷ್ಟು ಉನ್ನತ ಮಟ್ಟದ ಸಂಸ್ಥೆಯೊಂದು ಇಷ್ಟೂ ಸಿದ್ಧತೆ ಮಾಡಿಕೊಳ್ಳಲಾರದೆ ಹೊದದ್ದು ಉದ್ದೇಶದ ದೃಷ್ಟಿಯಿಂದ–ಅಂದರೆ ಬೆಳೆಗಾರರಿಗೆ ಆದು ನೀಡಬೇಕಾದ ಮಹತ್ತರ ರಕ್ಷಣೆಯ ದೃಷ್ಟಿಯಿಂದ–ಅಕ್ಷಮ್ಯವೇ ಆಗುತ್ತ

### ಕೆಲವು ಬೇಡಿಕೆಗಳು

ಪಿ. ಜಿ. ಗುರ್ಜರ್‌ರವರು ಮಾತಾಡು ಕೇವಲ ಭಾಷಣ ಅಥವ ಕಾಗದದ ಮೇಲ ಯೋಜನೆಗಳಿಂದ ಪ್ರಯೋಜನವಿಲ್ಲ. ಯ ಅಧಿಕಾರಿಗಳು ಮತ್ತು ಬ್ಯಾಂಕಿನ ಮ್ಯಾನೇಜರ್‌ಗಳು ವಿವಿಧ ಯೋಜನೆಗಳ ಬಗ್ಗೆ ಳುತ್ತಾರೆ. ಆದರೆ ಪ್ರತ್ಯಕ್ಷ ನೋಡಿ ಯಾವುದೂ ಸರಿಯಿರುವುದಿಲ್ಲ. ಅನ ರಿಕಾರ್ಡ್‌ಗಳನ್ನು ಕೇಳುವುದು, ವಿ ಎಲ್ಲ ವಿಪರೀತ. (ಈ ಸಬ್ಸಿಡಿ, ಸಾಲ ಇ ದಿ ವ್ಯವಸ್ಥೆಯ ಬಗ್ಗೆ ಅಧಿಕಾರಿಗಳು ಏನ ಒಂದು ರೀತಿ ಹೊಟ್ಟೆಕಿಚ್ಚು ಇರುವ ಹ ವರ್ತಿಸುತ್ತಾರೆ) ಎಂದು ಹೇಳಿ, ಬೆಳೆಗಾ ಪರವಾಗಿ ಈ ಕೆಳಗಿನ ಬೇಡಿಕೆಗಳನ್ನು ಕ್ಕಿ ಮಂಡಳಿಯ ಅಧ್ಯಕ್ಷರ ಮುಂದಿಟ್ಟರು.

1) ಸಬ್ಸಿಡಿ ಪ್ರಯೋಜನ ಎಲ್ಲರಿಗ ಸಿಗಬೇಕು. 'ಅಲಾಟ್‌ಮೆಂಟ್ ಇಲ್ಲ' ಎ ಹಿಂದಕ್ಕೆ ಕಳಿಸಬಾರದು;

2) ಮಂಡಳಿಯ ಕೊಪ್ಪ ಕಚೇರಿಗೆ ಒ ದು ಫೋನ್ ಹಾಕಿಸಬೇಕು;

3) ಈ ಪ್ರಾಂತ್ಯಕ್ಕೆ ಒಂದು ಪೂಲ್ ಡಿಪೋ ಕೊಡಿಸಬೇಕು;

4) ಕ್ಯೂರಿಂಗ್ ಹೌಸ್ ಬಗ್ಗೆಯೂ ಸಬ್ಸಿಡಿ ಕೊಡಬೇಕು. ಮಲೆನಾಡಿನಲ್ಲಿ ಇದ ಅಗತ್ಯ ಮತ್ತು ಖರ್ಚು ಹೆಚ್ಚಾಗಿರುತ್ತದೆ

5) ಎರಡು ಹೆಕ್ಟೇರ್ ಜಮೀನಿಗಿಂತ ಕಡಿಮೆ ಇರುವವರಿಗೂ ವಿವಿಧ ಯೋಜನೆಗ ಸೌಲಭ್ಯ ಕೊಡಿಸಬೇಕು.

### ರೈತರ ಅಭಿಪ್ರಾಯಗಳು

ರೈತರ ಸಮಸ್ಯೆಗಳ ಬಗ್ಗೆ ಮಾತನಾಡಿ ನ.ರಾ.ಪುರದ ಸದಾನಂದ ಅವರು, ನೀರಾ ವರಿ ಪಂಪ್ ಸೆಟ್‌ಗೆ, ಗಿಡ ಮರು ನೆಡುವಿಕೆಗೆ ಸಲ್ಲುವ ಸಾಲ ಮತ್ತು ಸಬ್ಸಿಡಿ ಯೋಜನೆಗಳ ಪ್ರಯೋಜನ ಮತ್ತಿತರ ಯಾವ ಸೌಲಭ್ಯವೂ 2 ಹೆಕ್ಟೇರ್‌ಗಿಂತ ಕಡಿಮೆ ಭೂಮಿ ಇರುವವರಿಗೆ ತಲುಪುತ್ತಿಲ್ಲ. ಈಗ ಹೆಚ್ಚಾಗಿ ಶ್ರೀಮಂತ ರೈತರೇ ಇದರ ಪೂರ್ಣ ಪ್ರಯೋಜನ ಪಡೆಯುತ್ತಿದ್ದಾರೆಂದರು.

ಕೊಡಗಿನ ಮುತ್ತಪ್ಪನವರು, ರೋಗ ಬಾಧೆಯಿಂದ ಹಾನಿಯಾದ ತೋಟಗಳಿಗೆ ಶೇ. 50 ರಿಯಾಯ್ತಿಯಲ್ಲಿ ಸಾಲ ಸೌಲಭ್ಯ ನೀಡಲು ಒತ್ತಾಯಿಸಿದರೆ, ಮೂಗ ಶ್ರೀನಿವಾಸ್ ಕಟ್ಟೆ ರೋಗಗಳಿಗೆ ಬೇಗ ಔಷಧ ಕಂಡು ಹಿಡಿಯಬೇಕೆಂದರು. ಬಿಸಿ ಗಾ

(3ನೇ ಪುಟಕ್ಕೆ)

---

ಈ ಭಾಗದಲ್ಲಿ ಈ 6 ತಿಂಗಳಲ್ಲಿ – ಕಳೆದ ಅಕ್ಟೋಬರ್‌ನಲ್ಲಿ ಶೃಂಗೇರಿಯಲ್ಲಿ ಅಡಿಕೆ ಬೆಳೆ ಬಗ್ಗೆ, ಜಯಪುರದಲ್ಲಿ ಕಳೆದ ತಿಂಗಳು ಕಾಫಿ ಬಗ್ಗೆ, ಈಗ ಏಲಕ್ಕಿ ಬಗ್ಗೆ ಹೀಗೆ–ಇದು ಇಂಥ ಮೂರನೇ ಪ್ರಯತ್ನ. ಹೀಗೆ ಕೃಷಿಪ್ರಯೋಗಾಲಯದಿಂದ ಬೆಳೆಗಾರನಿಗೆ ತಲುಪುವ ಇಂಥ ಪ್ರಯತ್ನಗಳು ವಿಶಿಷ್ಟವಾದ ಮತ್ತು ಬಹಳ ಸ್ವಾಗತಾರ್ಹವಾದ ಬೆಳವಣಿಗೆ. ಈ ಹಿಂದೆಯೇ ಆಗಬೇಕಾಗಿದ್ದುದು ಕೂಡ ಇಂಥ ಪ್ರಯತ್ನಗಳು ಇನ್ನಷ್ಟು ಅರ್ಥಪೂರ್ಣವಾಗಬೇಕಾದರೆ:

1 ಇದರಲ್ಲಿ ಭಾಗವಹಿಸುವ ಸಂಸ್ಥೆಗಳು, ಅಧಿಕಾರಿಗಳು ಮತ್ತು ಸಂಶೋಧಕರು ಇನ್ನೂ ಹೆಚ್ಚಿನ ಜವಾಬ್ದಾರಿಯಿಂದ ಹಾಗೂ ರೈತರಿಂದಲೂ ತಿಳಿದು ಕೊಳ್ಳುವ ತೆರೆದ ಮನಸ್ಸಿನಿಂದ ಭಾಗವಹಿಸಬೇಕು;

2 ಇಲ್ಲಿ ಎತ್ತಿ ತೋರಿಸಲ್ಪಡುವ ತಪ್ಪು, ದೋಷ, ದೌರ್ಬಲ್ಯಗಳನ್ನು ಸಂಬಂಧಪಟ್ಟವರು ಹೆಚ್ಚೆಚ್ಚು ತಿದ್ದಿಕೊಳ್ಳಬೇಕು, ಹಾಗೂ ಇಲ್ಲಿ ಬರುವ ಸಲಹೆ ಮತ್ತು ಬೇಡಿಕೆಗಳು ತ್ವರಿತವಾಗಿ ಕಾರ್ಯಗತವಾಗುವ ಭರವಸೆಯಿರಬೇಕು;

3 ಹೆಚ್ಚು ರೈತರು ಭಾಗವಹಿಸಲು ಅನುಕೂಲವಾಗುವಂತೆ ಸ್ಥಳೀಯವಾಗಿ ವ್ಯಾಪಕ ಪ್ರಚಾರ ನೀಡಬೇಕು: ಅವರಿಗೆ ಹೆಚ್ಚು ಅರ್ಥವಾಗಲು ಹೆಚ್ಚು ಕನ್ನಡದ ಬಳಕೆ (ಕನ್ನಡ ಬಾರದವರ ಭಾಷಣದ ತರ್ಜುಮೆ) ಆಗಬೇಕು: ಭಾಷಣಗಳು ಹೆಚ್ಚು ರೈತರ ಸಮಸ್ಯೆಗಳಿಗೆ ಹತ್ತಿರವಾಗಿರಬೇಕು;

4 ಸ್ಥಳೀಯ ಉತ್ಸಾಹಿ ರೈತರ ಮತ್ತು ಬೆಳೆಗಾರರ ಸಂಘಗಳ ಪೂರ್ಣ ಸಹಕಾರ ಪಡೆಯಬೇಕು.

—ಈ ಕೆಲವು ಸಲಹೆಗಳನ್ನು ವ್ಯವಸ್ಥಾಪಕರುಗಳು ಗಮನಿಸುವುದೊಳ್ಳೆಯದು.

---

# ಏಲಕ್ಕಿ ಕೃ|| ಕಾ|| ಮಕ್ಕಳಿಗೆ ವಿದ್ಯಾರ್ಥಿ ವೇತನ

ಏಲಕ್ಕಿ ತೋಟಗಳಲ್ಲಿ ದುಡಿಯುತ್ತಿರುವ ಕಾರ್ಮಿಕರ ಮಕ್ಕಳಿಗೆ ಈ ಕೆಳಗಿನಂತೆ ವಿದ್ಯಾರ್ಥಿ ವೇತನಗಳನ್ನು ನೀಡುತ್ತಿದ್ದು, ಇದನ್ನು ಪಡೆಯಲು ಅವರುಗಳು ಸಂಬಂಧಪಟ್ಟ ಏಲಕ್ಕಿ ಕ್ಷೇತ್ರಾಧಿಕಾರಿಗಳನ್ನು ಸಂಪರ್ಕಿಸಬೇಕು.

ಮಾಧ್ಯಮಿಕ ಶಾಲೆ 100 ರೂ.
ಪ್ರೌಢಶಾಲೆ 150 ರೂ.
ಪಿ. ಯು. ಸಿ. 200 ರೂ.
ಪದವಿ ಮತ್ತು ಮೇಲ್ಪಟ್ಟು 250 ರೂ.

ಪ್ರೊಫೆಶನಲ್ ಕೋರ್ಸುಗಳಿಗೆ ಈ ವಿದ್ಯಾರ್ಥಿ ವೇತನದ ಜೊತೆಗೆ 10 ತಿಂಗಳ ಕಾಲ ತಿಂಗಳಿಗೆ 300 ರೂ. ಹಾಸ್ಟೆಲ್ ಶುಲ್ಕ ಕೊಡಲಾಗುವುದು.

ಈ ಯೋಜನೆಯ ಸಹಾಯದಿಂದ ವಿದ್ಯಾಭ್ಯಾಸ ಮಾಡಿದ ಒಬ್ಬ ಕಾರ್ಮಿಕ ಪುತ್ರ ಈಗ ವೈದ್ಯನಾಗಿದ್ದು, 'ಸದ್ಯದಲ್ಲೇ ಇನ್ನಷ್ಟು ಜನ ವೈದ್ಯರು, ಇಂಜಿನಿಯರುಗಳು ಮತ್ತಿತರ ಉನ್ನತ ವಿದ್ಯಾವಂತರನ್ನು ನಾವು ಹೊಂದುತ್ತೇವೆ' ಎಂದು ಏಲಕ್ಕಿ ಮಂಡಳಿ ನಿರ್ದೇಶಕರು ಪತ್ರಕರ್ತರೊಂದಿಗೆ ಅಭಿಮಾನದಿಂದ ಹೇಳಿದರು. ಕರ್ನಾಟಕದಲ್ಲಿ 1984 ರಲ್ಲಿ 11 ಲಕ್ಷ ರೂ. ವಿದ್ಯಾರ್ಥಿ ವೇತನ ನೀಡಿರುವುದಾಗಿಯೂ ಅವರು ತಿಳಿಸಿದರು.

# ಗೋವಿಂದ ಗೌಡರ ಗಮನಕ್ಕಾಗಿ ಕೆಲವು ಸಂಗತಿಗಳು

ರಾಜ್ಯ ಸರ್ಕಾರ ಮತ್ತು ನಮ್ಮ ಕ್ಷೇತ್ರದ ಶಾಸಕರು ಈಗಾಗಲೇ ಗುರುತಿಸಿ ಗಮನ ಹರಿಸಿರುವ ಸಮಸ್ಯೆಗಳಲ್ಲದೆ, ಸಾರ್ವಜನಿಕರು ಸರ್ಕಾರದಿಂದ ಈಡೇರಿಕೆ ನಿರೀಕ್ಷಿಸುವ ಕೆಲವು ಸೌಲಭ್ಯ ಮತ್ತು ಬೇಡಿಕೆಗಳು ಹಾಗೂ ಸರ್ಕಾರದ ಗಮನ ಸೆಳೆಯಬಯಸುವ ಕೆಲವು ಅಂಶಗಳನ್ನು "ಗೋವಿಂದ ಗೌಡರ ಗಮನಕ್ಕಾಗಿ" ಆಗಿಂದಾಗ್ಗೆ ಪ್ರಕಟಿಸುತ್ತೇವೆ.

### ವೈದ್ಯರ, ಶಿಕ್ಷಕರ ನೇಮಕ

ಎಲ್ಲಾ ಕಡೆ ಶಾಲೆ–ಕಾಲೇಜುಗಳಲ್ಲಿ ಶಿಕ್ಷಕರ ಕೊರತೆ ತೀವ್ರವಾಗಿದೆ. ಜಿಲ್ಲಾ ನೇಮಕಾತಿ ಸಮಿತಿಯಿಂದ ಆಯ್ಕೆ ನಡೆದಿದೆಯಾದರೂ, ಐದಾರು ವರ್ಷದಿಂದ ಕೆಲಸ ಮಾಡುತ್ತಿದ್ದ ಸ್ಥಳೀಯ ಶಿಕ್ಷಕರಿಗೆ ವೃಥಾ ಮತ್ತೊಮ್ಮೆ ಸಂದರ್ಶನ ನಡೆಸಿ, (ಇವರು ಹಿಂದೆ ಸಂದರ್ಶನ, ರೋಸ್ಟರ್‌ಗಳ ಮೂಲಕವೇ ಆಯ್ಕೆಯಾಗಿದ್ದವರು) ಕೆಲವರನ್ನು ಕೈಬಿಟ್ಟಿರುವುದು ಮುಂತಾದ ಅನ್ಯಾಯ-ಅಕ್ರಮಗಳಿಂದಾಗಿ ನೇಮಕ ತಡವಾಗಿದೆ. ಅವರನ್ನೆಲ್ಲ ನೇಮಿಸಿದರೂ ಕೊರತೆ ಮತ್ತೂ ಉಳಿಯಬಹುದು.

ಕಾಲೇಜುಗಳಲ್ಲಂತೂ ಕೊರತೆ ಇನ್ನೂ ತೀವ್ರ. ಸ್ಥಳೀಯ ಅಭ್ಯರ್ಥಿಗಳನ್ನು ನೇಮಿಸಲಾಗಿದ್ದರೂ ಈ ವ್ಯವಸ್ಥೆ ಏನೂ ತೃಪ್ತಿಕರವಾಗಿಲ್ಲ. ಅದರಲ್ಲೂ, ಜೀವನದಲ್ಲಿ ಮುಂದೆ, ಪಟ್ಟಣಗಳಲ್ಲಿ ಕಲಿತ 'ಸುಸಜ್ಜಿತ'ರೊಂದಿಗೆ ಈ ಹಳ್ಳಿಗಳ ವಿದ್ಯಾವಂತರು ಸ್ಪರ್ಧಿಸಬೇಕಾಗಿರುವ ಹಿನ್ನೆಲೆಯಲ್ಲಿ ಈ ಕೊರತೆ ಭಾರಿ ಕ್ರೂರವಾದುದಾಗುತ್ತದೆ.

ಹಲವಾರು ಗ್ರಾಮಾಂತರ ಪ್ರದೇಶಗಳಲ್ಲಿ ಸರ್ಕಾರಿ ಆಸ್ಪತ್ರೆಗಳನ್ನು ತೆರೆಯಲಾಗಿದೆ. ಕಳೆದ ವರ್ಷ ಆಸ್ಪತ್ರೆಗಳಿಗೆ ಒದಗಿಸುವ ಔಷಧಿಗಳ ವಾರ್ಷಿಕ ಪ್ರಮಾಣವನ್ನು 12 ಸಾವಿರದಿಂದ 20 ಸಾವಿರ ರೂ.ಗೆ ಏರಿಸಲಾಗಿದೆ. ಆದರೆ ವೈದ್ಯರ ನೇಮಕವೇ ಎಲ್ಲ ಕಡೆ ಆಗಿಲ್ಲ. ಈಚೆಗೆ ಸುಮಾರು ಐನೂರರಷ್ಟು ವೈದ್ಯರ ನೇಮಕಕ್ಕೆ ಸಂದರ್ಶನ ಇತ್ಯಾದಿ ನಡೆಸಲಾಗಿದೆಯಾದರೂ ನೇಮಕ ಇನ್ನೂ ಆಗಿಲ್ಲ. ಅಷ್ಟೇ ಅಲ್ಲ, ಮತ್ತೆ ಕೂಡ ಕೊರತೆ ಪೂರ್ತಿ ತುಂಬಲಾರದು.

ಈ ಎಲ್ಲಾ ನೇಮಕಗಳನ್ನೂ ತ್ವರಿತವಾಗಿ ಪೂರೈಸಿ ಎಲ್ಲ ಕಡೆಯೂ ಕೊರತೆ ತುಂಬಬೇಕು. ಜೊತೆಗೆ ಹಲವಾರು ಅತ್ಯಾವಶ್ಯಕ ಇಲಾಖೆ-ಕಚೇರಿಗಳಲ್ಲೂ ಸಿಬ್ಬಂದಿಯ ಕೊರತೆ ಕಾರಣ ಎಲ್ಲಾ ತರದ ಕೆಲಸಗಳೂ ವಿಳಂಬವಾಗಿ ಲಂಚ ಮಿತಿ ಮೀರಲು ಅವಕಾಶವಾಗಿದೆ. **ಸಾಮಾನ್ಯವಾಗಿ ಎಲ್ಲ ಕೊರತೆಯ ಹೊರೆಯೂ ಹಳ್ಳಿಗಾಡಿನ ಮೇಲೇ ಹೆಚ್ಚಾಗಿ ಬೀಳುವುದರಿಂದ,** ಮೊದಲೇ ಸೌಲಭ್ಯಗಳಿಂದ ವಂಚಿತವಾಗಿರುವ ಹಳ್ಳಿಗಳ ಬದುಕನ್ನು ಇನ್ನೂ ಅಸಹನೀಯವಾಗಿಸುವುದು ಸಲ್ಲದು.

### ಕುಡಿಯುವ ನೀರು

ಮತ್ತೊಂದು ಬೇಸಿಗೆ ಬಂದಿದೆ. ಕುಡಿವ ನೀರಿಗಾಗಿ ಹಾಹಾಕಾರ ಹಬ್ಬುತ್ತದೆ ಉರಿವ ಗಾಯಕ್ಕೆ ಉಪ್ಪು ಸವರಿದಂತೆ, ನೀರಿನ ಅಭಾವವಿರುವೆಡೆ, ಕೆಟ್ಟು ತಿಂಗಳುಗಟ್ಟಲೆಯಿಂದ ರಿಪೇರಿಯಾಗದೆ ನಿಂತ ಬೋರ್ ವೆಲ್‌ಗಳು ಜನರ ಕಣ್ಣಿಗೆ ಕ್ರೂರವಾಗಿ ಕುಕ್ಕುತ್ತವೆ.

ಕುಡಿವ ನೀರು ಸರಬರಾಜಿನ ಯೋಜನೆಗಳು ಇದ್ದಲ್ಲಿ ಸಹ ಆಕಸ್ಮಾತ್ ನೀರು ಪೂರೈಕೆ ಕುಸಿದರೆ ಬೋರ್‌ವೆಲ್‌ಸ್ವಲ್ಪ ಮಟ್ಟಿಗೆ ನಿಭಾಯಿಸುತ್ತವೆ. ಈ ಎಲ್ಲಾ ಕಾರಣಗಳಿಂದ, ಎಲ್ಲಾ ಕಡೆ ಬೋರ್‌ವೆಲ್‌ಗಳನ್ನು ಸುಸ್ಥಿತಿಯಲ್ಲಿಡುವುದಕ್ಕೆ ತೀವ್ರ ಗಮನ ಕೊಡಬೇಕು.

(4ನೇ ಪುಟಕ್ಕೆ)

# ಏಲಕ್ಕಿ ಬೆಳೆ ವಿಚಾರ ಸಂಕಿರಣ

(ಎರಡನೇ ಪುಟದಿಂದ)

ಯಿಂದ ಮತ್ತು ನೀರು ಹೀರುವ ಮರಗಳಿಂದ ಬಹಳ ತೊಂದರೆಯಾಗುತ್ತಿದ್ದು, ತೋಟದ ಸುತ್ತ ಹೆಚ್ಚಿನ ನೆರಳು ಮಾಡಲು ಅನುಕೂಲವಿರಬೇಕೆಂದರು ಕೆ. ವಿ. ಬಾಲಕೃಷ್ಣ.

ಈ ಪ್ರಾಂತ್ಯಗಳಿಗೆ ಕನ್ನಡ ಮಾತನಾಡುವ ಅಧಿಕಾರಿಗಳನ್ನು ಹೆಚ್ಚಿಗೆ ನೇಮಿಸಬೇಕೆಂದು ಒತ್ತಾಯಿಸಿದ ಕೆ.ಆರ್.ದಯಾನಂದ, ಮಾರ್ಕ್‌ಫೆಡ್‌ನವರು ಶಿವಮೊಗ್ಗದಲ್ಲಿ ಏಲಕ್ಕಿ ಪೂಲ್-ಡಿಪೊ ತೆರೆಯಲು ಮಂಡಳಿಯ ಅನುಮತಿ ಕೋರಿದ್ದಾರೆ. ಇದನ್ನು ಕೂಡಲೇ ವ್ಯವಸ್ಥೆ ಮಾಡಿದರೆ ಈ ಭಾಗದ 5–6 ತಾ॥ನವರಿಗೆ ಬಹಳ ಅನುಕೂಲವಾಗುತ್ತದೆ ಎಂದರು.

### ತಜ್ಞರ ಸಲಹೆಗಳು

ಮೂಡಿಗೆರೆಯ ಪ್ರಾದೇಶಿಕ ಸಂಶೋಧನಾ ಸಂಸ್ಥೆಯ ಡಾ॥ ಪಟ್ಟಣಶೆಟ್ಟಿ, ಸೂಳೆಕೇರಿ, ಡಾ॥ ಚಂದ್ರಶೇಖರ, ಸಕಲೇಶಪುರದ ಏಲಕ್ಕಿ ಸಂಶೋಧನಾ ಸಂಸ್ಥೆಯ ಡಾ॥ ಸುದರ್ಶನ್, ಬೆಂಗಳೂರು ಕೃಷಿ ವಿ.ವಿ. ನಿಲಯದ ಡಾ॥ ಕೃಷ್ಣ ಶಾಸ್ತ್ರಿ ಇವರುಗಳು ಕೃಷಿಯ ಬಗ್ಗೆ ವಿವರವಾದ ಮಾಹಿತಿಗಳನ್ನು ನೀಡಿದರು.

ಬೇಸಾಯ ಪದ್ಧತಿಯನ್ನು ವಿವರಿಸಿದ ಡಾ॥ ಪಟ್ಟಣಶೆಟ್ಟಿ, ಹಳೆಯ ಗಿಡಗಳಿಗಿಂತ ಹೊಸಗಿಡಗಳಲ್ಲಿ ಹೆಚ್ಚು ಫಸಲು ನಿರೀಕ್ಷಿಸಬಹುದು. ಉತ್ತಮ ಬೀಜದಿಂದ ತಯಾರಿಸಿದ ಸಸಿಗಿಂತ, ಉತ್ತಮ ಗಿಡಗಳಲ್ಲಿ ಬಂದ ಹೆಚ್ಚುವರಿ ಮೊಳಕೆಗಳನ್ನು ನೆಡುವುದು ಬಹಳ ಉತ್ತಮ. ಆದರೆ ಈ ರೀತಿ ಹೆಚ್ಚು ಗಿಡಗಳನ್ನು ಸಂಗ್ರಹಿಸಲು ಆಗುವುದಿಲ್ಲ ಎಂದು ಹೇಳಿ, ಏಲಕ್ಕಿಗೆ ಕಾಫಿಗಿಂತ ಹೆಚ್ಚು ನೆರಳು ಬೇಕಾಗುವುದರಿಂದ 2 ಅಂತಸ್ತಿನ ನೆರಳು ಬಿಡಬೇಕು ಎಂದರು.

ತೋಟಕ್ಕೆ ಸುಟ್ಟ ಸುಣ್ಣ ಉಪಯೋಗಿಸಿದಾಗ ಬೇರೆ ರಾಸಾಯನಿಕಗಳನ್ನು ಕನಿಷ್ಠ 15 ದಿನಗಳವರೆಗೆ ಉಪಯೋಗಿಸಬಾರದು ಎಂದು ಅವರು ತಿಳಿಸಿದರು.

ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್‌ನ ಅಧ್ಯಕ್ಷರು ಮಾತನಾಡಿ, 9.1/2 ಬಡ್ಡಿ ದರದ ಮತ್ತು 2 ವರ್ಷಕಾಲ ಯಾವ ಕಂತೂ ಕಟ್ಟದೆ ನಂತರ 9 ವರ್ಷದಲ್ಲಿ ತೀರಿಸಬಹುದಾದ ವಿವಿಧ ಯೋಜನೆಗಳನ್ನು ತಿಳಿಸಿದರು. ಎಲ್ಲಾ ಬ್ಯಾಂಕಿನವರೂ ವಿವಿಧ ಬೆಳೆಗಳಿಗೆ ಯಾವ ಯಾವ ಯೋಜನೆಗಳಿವೆ ಎಂಬುದನ್ನು ರೈತರ ಸಂಸ್ಥೆಗಳಿಗೆ ತಿಳಿಸಬೇಕೆಂದು ಕೋರಲಾಯಿತು.

ರಸಗೊಬ್ಬರ, ಕೀಟನಾಶಕ, ಸ್ಪ್ರಿಂಕ್ಲರ್ ಮತ್ತಿತರ ಕೃಷಿ ಸಂಬಂಧಿತ ಉತ್ಪನ್ನಗಳ ವಿವಿಧ ಕಂಪನಿಗಳ ಹಾಗೂ ಏಲಕ್ಕಿ ಮಂಡಳಿಯ ಸ್ಟಾಲುಗಳು ಸಮ್ಮೇಳನದ ಪ್ರತಿನಿಧಿಗಳಿಗೆ ವಿವಿಧ ಮಾಹಿತಿ ನೀಡಿದವು.

### ಉಪಯುಕ್ತ

ಒಟ್ಟಿನಲ್ಲಿ ಇದನ್ನೊಂದು ಉತ್ತಮ ಉಪಯುಕ್ತ ಕಾರ್ಯಕ್ರಮವಾಗಿಸಲು ವ್ಯವಸ್ಥಾಪಕರು ಬಹಳ ಶ್ರಮಿಸಿದ್ದರು. ಸಭಾಂಗಣದಲ್ಲಿ ಮಾತುಗಳು ಪ್ರತಿಧ್ವನಿಸಿ ಭಾಷಣಗಳನ್ನು ಗ್ರಹಿಸಲು ಬಹಳ ತೊಂದರೆಯಾದುದು, ಇಂಗ್ಲೀಷಿನ ಪ್ರಹಾರ (ತರ್ಜುಮೆ ಯೂ ಇಲ್ಲದೆ.) ಕೆಲವೊಮ್ಮೆ ಭಾಷಣಗಳು ರೈತರ ಅವಶ್ಯಕತೆಗೆ ಇನ್ನೂ ನೇರ ಮತ್ತು ಹತ್ತಿರವಾಗಬೇಕಾಗಿದ್ದ ಅಗತ್ಯ—ಮುಂತಾದ ಕೆಲವು ನ್ಯೂನತೆಗಳನ್ನು ಬಿಟ್ಟರೆ ಇದು ಬಹಳ ಉಪಯುಕ್ತವಾದ ಕಾರ್ಯಕ್ರಮವೆನ್ನುವುದರಲ್ಲಿ ಅನುಮಾನವಿಲ್ಲ.

# ಕೊಪ್ಪ ಹಿರಿಕೆರೆ ಹೂಳೆತ್ತುವುದು ದುಸ್ಸಾಧ್ಯ

## —ಲೋಕೋಪಯೋಗಿ ಇಲಾಖೆಯ ಸ್ಪಷ್ಟನೆ

...ಕೆಲ ಸಮಯದ ಹಿಂದೆ, ಕೊಪ್ಪದ ಹಿರೀ...ಕೆರೆಯ ಹೂಳೆತ್ತಿ ಸ್ವಚ್ಛ ಗೊಳಿಸೋಣ ...ಎಂದು ಹಲವು ಉತ್ಸಾಹಿಗಳು ಎತ್ತಿದ್ದ ...ಆಲೋಚನೆಯೊಂದನ್ನು ನಮ್ಮ ಪತ್ರಿಕೆಯ ...ಮೂಲಕ ಜನರ ಮುಂದಿಟ್ಟಿದ್ದೆವು. ಈ ಸಲಹೆ ...ಕೊಪ್ಪದ ಎಲ್ಲಾ ತರದ ಜನರಿಂದಲೂ, ...ಯನ್ಸ್, ರೋಟರಿ ಸಂಸ್ಥೆಗಳು, ಯುವಕ ...ಸಂಘಗಳು, ಪುರಸಭೆ, ಚರ್ಚ್ ಮುಂತಾಗಿ ...ಎಲ್ಲಾ ಕಡೆಯಿಂದಲೂ ಪೂರ್ಣ ಉತ್ಸಾಹದ ...ಪ್ರತಿಕ್ರಿಯೆ ಬಂದಿತ್ತು. ಈ ಕಾರ್ಯವನ್ನು ...ಗೆ ನಿಭಾಯಿಸಬೇಕು ಎಂಬ ಬಗ್ಗೆ ಯೋ... ಮತ್ತು ಸಿದ್ಧತೆಗೆ ಈ ಉತ್ಸಾಹಿಗಳು ...ತೊಡಗುವಷ್ಟರಲ್ಲಿ, ಹಿರಿಯ, ಅನುಭವಿ ...ಇಂಜಿನಿಯರ್ ಒಬ್ಬರು, 15-20 ಅಡಿಯ ...ಆಳವಾಗಿ ಸಂಗ್ರಹವಾಗಿರುವ ಈ ಹೂಳನ್ನು ಯಾವ ರೀತಿಯಲ್ಲೂ ಮನುಷ್ಯರಿಂದ ...ಎತ್ತಲು ಸಾಧ್ಯವಿಲ್ಲ. ಏನಿದ್ದರೂ ಕೆರೆಯ ಕಟ್ಟೆಯನ್ನು ಕಡಿದು ಮಳೆಗಾಲದಲ್ಲಿ ಹೂಳು ಪೂರ್ತಿ ಕೊಚ್ಚಿ ಹೋಗಲು ಬಿಡಬೇಕು ಎಂದರು.

ಈ ಬಗ್ಗೆ ನಾವು ಲೋಕೋಪಯೋಗಿ ಇಲಾಖೆಯವರ ಸಲಹೆ ಕೇಳಿದ್ದಕ್ಕೆ, ಈ ಕೆರೆಯನ್ನು ಸ್ವತಃ ಪರಿಶೀಲಿಸಿ ಅದರ ಬಗ್ಗೆ ಪೂರ್ಣ ಪರಿಚಯವಿರುವ ಚಿಕ್ಕಮಗಳೂರಿನ ಲೋಕೋಪಯೋಗಿ ಇಲಾಖೆ ಎಕ್ಸಿಕ್ಯುಟೀವ್ ಇಂಜಿನಿಯರ್‌ರವರು ಹೀಗೆ ಬರೆದಿದ್ದಾರೆ—

"ಈಗಾಗಲೇ ನಾನು ಖುದ್ದಾಗಿ ಮೇಲ್ಕಂಡ ಕೆರೆಯನ್ನು ಪರಿಶೀಲಿಸಿದ್ದೇನೆ. ಕೆರೆಯ ಏರಿಯನ್ನು ಈ ವರ್ಷ ಎನ್. ಆರ್. ಇ. ಪಿ. ಯೋಜನೆಯಲ್ಲಿ ಭದ್ರಪಡಿಸಿದೆ. ಈ ಕೆರೆಗೆ ಕೋಡಿ ಇರಲಿಲ್ಲ. ಈಗ ಕೋಡಿಯನ್ನು ಕಟ್ಟಲಾಗಿದೆ. ಇದರಿಂದಾಗಿ ಕೆರೆಯಲ್ಲಿ ನೀರು ಹಿಡಿಯುವ ಸಾಮರ್ಥ್ಯ ಜಾಸ್ತಿಯಾಗಿದೆ.

(4ನೇ ಪುಟಕ್ಕೆ)

# ಮಂತ್ರಿಗಳು-ಖಾತೆಗಳು

ರಾಮಕೃಷ್ಣ ಹೆಗಡೆ– (ಮುಖ್ಯ ಮಂತ್ರಿ) ಹಣಕಾಸು, ಸಂಪುಟ ವ್ಯವಹಾರ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ, ಪರಿಸರ ಸಮತೋಲ, ವಿಜ್ಞಾನ ಮತ್ತು ತಂತ್ರಜ್ಞಾನ.

ಬಿ. ರಾಚಯ್ಯ – ಒಳಾಡಳಿತ.

ಅಬ್ದುಲ್ ನಜೀರ್ ಸಾಬ್ – ಗ್ರಾಮೀಣ ಅಭಿವೃದ್ಧಿ, ವಕ್ಫ್.

ಎಸ್. ಆರ್. ಬೊಮ್ಮಾಯಿ – ಕಂದಾಯ ಮತ್ತು ಯೋಜನೆ.

ಎಚ್. ಡಿ. ದೇವೇಗೌಡ – ಲೋಕೋಪಯೋಗಿ ಮತ್ತು ನೀರಾವರಿ.

ಜೆ. ಎಚ್. ಪಟೇಲ್ – ಭಾರಿ ಮತ್ತು ಮಧ್ಯಮ ಕೈಗಾರಿಕೆ.

ವಿ. ಎಲ್. ಪಾಟೀಲ್ – ಸಮಾಜ ಕಲ್ಯಾಣ.

ಎ. ಲಕ್ಷ್ಮೀಸಾಗರ್ – ನ್ಯಾಯಾಂಗ, ಕಾನೂನು ಮತ್ತು ಸಂಸದೀಯ ವ್ಯವಹಾರ.

ಆರ್. ಎಚ್. ಜಾಲಪ್ಪ–ಸಹಕಾರ.

ಡಿ. ಮಂಜುನಾಥ್ – ಕಾರ್ಮಿಕ.

ಡಾ॥ ಎಚ್. ಎಲ್. ತಿಮ್ಮೇಗೌಡ – ಆರೋಗ್ಯ ಮತ್ತು ಕುಟುಂಬ ಯೋಜನೆ.

ಜೆ. ಎಸ್. ದೇಶಮುಖ್ – ವಿದ್ಯುತ್, ಗಣಿ ಮತ್ತು ಭೂಗರ್ಭ ವಿಜ್ಞಾನ.

ಜಿ. ಬಸವಣ್ಣೆಪ್ಪ – ಆಹಾರ.

ಎಂ. ರಘುಪತಿ – ಶಿಕ್ಷಣ.

ಸಿ. ಬೈರೇಗೌಡ – ಮತ್ಸ್ಯೋದ್ಯಮ ಮತ್ತು ಬಂದರು.

### ರಾಜ್ಯ ಸಚಿವರು

ಬಿ.ಎ.ಜೀವಿಜಯ – ಅರಣ್ಯ

ಎಂ. ಪಿ. ಪ್ರಕಾಶ್ – ಕೃಷಿ.

ಪಿ.ಜಿ.ಆರ್.ಸಿಂಧ್ಯ – ಸಾರಿಗೆ ಮತ್ತು ವಸತಿ

ಡಾ॥ ಜೀವರಾಜ ಆಳ್ವ – ವಾರ್ತೆ, ಪ್ರವಾಸೋದ್ಯಮ, ಯುವಜನ, ಕನ್ನಡ ಮತ್ತು ಸಂಸ್ಕೃತಿ.

ರಮೇಶ್ ಜಿಗಜಿಣಗಿ – ಅಬಕಾರಿ.

ಸಿದ್ಧರಾಮಯ್ಯ – ಪಶುಸಂಗೋಪನ.

ಬಿ. ಸೋಮಶೇಖರ್ – ತೋಟಗಾರಿಕೆ.

ವೈ. ಕೆ. ರಾಮಯ್ಯ – ರೇಷ್ಮೆ.

ಎಚ್. ಜಿ. ಗೋವಿಂದ ಗೌಡ – ಪ್ರಾಥಮಿಕ ಮತ್ತು ವಯಸ್ಕರ ಶಿಕ್ಷಣ.

ವೀರಣ್ಣ – ಸಣ್ಣ ಉಳಿತಾಯ, ಬಂದೀಖಾನೆ

ಆರ್. ವಿ. ದೇಶಪಾಂಡೆ–ಸಣ್ಣ ಕೈಗಾರಿಕೆ (ಇವಿಷ್ಟು ಸ್ವತಂತ್ರ ನಿರ್ವಹಣೆಯ ಖಾತೆಗಳು)

ಬಸವರಾಜ ಪಾಟೀಲ್ – ನೀರಾವರಿ.

ಡಾ॥ ಎ.ಪುಷ್ಪಾವತಿ – ಸಮಾಜ ಕಲ್ಯಾಣ.

ಬಿ. ಆರ್. ಯಾವಗಲ್ – ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್

ಡಿ. ಬಿ. ಇನಾಂದಾರ್ – ಆರೋಗ್ಯ ಮತ್ತು ಕುಟುಂಬ ಕಲ್ಯಾಣ.

## ಲಯನ್ಸ್ ಕ್ಲಬ್ ಆಶ್ರಯದ ಉಚಿತ ನೇತ್ರ ಚಿಕಿತ್ಸೆ ಶಿಬಿರ

ಕೊಪ್ಪ: ಇಲ್ಲಿನ ಲಯನ್ಸ್ ಕ್ಲಬ್ ಆಶ್ರಯದಲ್ಲಿ 7-4-85ನೇ ಭಾನುವಾರ ಪುರಭವನದಲ್ಲಿ ಮಣಿಪಾಲದ ಡಾ|| ಪಿ.ಎಲ್.ಶ್ರೀನಿವಾಸ ರಾವ್ ಅವರಿಂದ ಉಚಿತ ಕಣ್ಣಿನ ಚಿಕಿತ್ಸೆ ಶಿಬಿರ ಏರ್ಪಡಿಸಲಾಗಿದೆ.

**ಕೊಡುಗೆ**

ಮಾರ್ಚ್ ತಿಂಗಳಲ್ಲಿ ಕೊಪ್ಪದಲ್ಲಿ ನಡೆದ ಕುಟುಂಬ ಯೋಜನೆಯ ಶಸ್ತ್ರಚಿಕಿತ್ಸಾ ಶಿಬಿರದಲ್ಲಿ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡವರಿಗೆ 30 ಸ್ಟೀಲ್ ತಟ್ಟೆಗಳನ್ನು ಹಂಚಲಾಯಿತು. ಅಲ್ಲದೆ, ಮಣಿಪಾಲಿನಲ್ಲಿ ಹೃದಯ ಶಸ್ತ್ರ ಚಿಕಿತ್ಸೆಗೊಳಗಾದ ಕು|| ಶಕೀಲಾ ಎಂಬವರಿಗೆ, ಗ್ಯಾಸ್ಟ್ರಿಕ್ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡ ಅಣ್ಣಪ್ಪ ಎಂಬವರಿಗೆ ತಲಾ 300 ರೂ. ಗಳ ಧನ ಸಹಾಯ ನೀಡಲಾಯಿತು.

## ಉತ್ತಮೇಶ್ವರ ಆಸ್ಪತ್ರೆ ಕಟ್ಟಡ ಏ. 9ರಂದು ಆರಂಭೋತ್ಸವ

(ನಮ್ಮ ಪ್ರತಿನಿಧಿಯಿಂದ)

ಉತ್ತಮೇಶ್ವರ: ಇಲ್ಲಿನ ಸರ್ಕಾರಿ ಆಸ್ಪತ್ರೆಯ ನೂತನ ಕಟ್ಟಡದ ಆರಂಭೋತ್ಸವವನ್ನು ಏ. 9ರಂದು ನೆರವೇರಿಸಲು ಮಂತ್ರಿ ಗೋವಿಂದ ಗೌಡರು ಒಪ್ಪಿದ್ದಾರೆಂದು ಅವರನ್ನು ಭೇಟಿ ಮಾಡಿದ್ದ ಆಸ್ಪತ್ರೆ ಸಂದರ್ಶಕ ಸಮಿತಿಯ ನಿಯೋಗ ತಿಳಿಸಿದೆ.

## ಶೀಘ್ರವೇ ಕಮ್ಮರ್ಡಿ-ಧರ್ಮಸ್ಥಳ ಸರ್ಕಾರಿ ಬಸ್

ಬಾಳೆಹೊನ್ನೂರು: ಕಮ್ಮರಡಿ-ಧರ್ಮಸ್ಥಳ ನಡುವೆ ಹಾಗೂ ತೀರ್ಥಹಳ್ಳಿ- ಚಿಕ್ಕಮಗಳೂರು ನಡುವೆ ಸದ್ಯದಲ್ಲೇ ಎರಡು ಸರ್ಕಾರಿ ಬಸ್‌ಗಳ ಓಡಾಟ ಆರಂಭವಾಗಲಿರುವುದಾಗಿ ಇಲ್ಲಿನ ರಸ್ತೆ ಬಳಕೆದಾರರ ವೇದಿಕೆಯ ಸಂಚಾಲಕ ಶಂಕರನಾರಾಯಣ ಭಟ್ ತಿಳಿಸಿದ್ದಾರೆ.

ತೀರ್ಥಹಳ್ಳಿಯಿಂದ ಬೆಳಿಗ್ಗೆ 6 30ಕ್ಕೆ ಹೊರಡುವ ಬಸ್ಸು 10 ಗಂಟೆಗೆ ಚಿಕ್ಕಮಗಳೂರಿಗೆ, ಅಲ್ಲಿಂದ ಸಂಜೆ 6 ಗಂಟೆಗೆ ಹೊರಟು ರಾತ್ರಿ 10ಕ್ಕೆ ತೀರ್ಥಹಳ್ಳಿಗೆ ತಲುಪುತ್ತದೆ.

ಧರ್ಮಸ್ಥಳದಿಂದ ಬೆಳಿಗ್ಗೆ 8 ಗಂಟೆಗೆ ಹೊರಡುವ ಬಸ್ಸು ಮಧ್ಯಾಹ್ನ 1 ಗಂಟೆಗೆ ಕಮ್ಮರಡಿ ತಲುಪಿ, 2 ಗಂಟೆಗೆ ವಾಪ್ಸು ಹೊರಟು ರಾತ್ರಿ 7.30ಕ್ಕೆ ಧರ್ಮಸ್ಥಳ ತಲುಪುತ್ತದೆ

ಈ ಮಾರ್ಗಗಳು ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಕಳೆದ ಸಲದ ಸಭೆಯಲ್ಲಿ ಅನುಮೋದನೆ ಪಡೆದುವೆಂದು ತಿಳಿದು ಬಂದಿರುವುದಾಗಿ ಭಟ್ ತಿಳಿಸಿದ್ದಾರೆ.

## ಯುಗಾದಿ ಉಡುಗೊರೆ!

(ನಮ್ಮ ಪ್ರತಿನಿಧಿಯಿಂದ)

ಶಾನುವಳ್ಳಿ: ಇಲ್ಲಿಗೆ ಸಮೀಪದ ಬಿಳುವಿನ ಕೊಡಿಗೆಯ ಕೃಷಿ ಕಾರ್ಮಿಕ ಬೋಬುವಿಗೆ ಯುಗಾದಿ ಉಡುಗೊರೆಯೊಂದು ಸಿಕ್ಕಿದೆ. ಹಬ್ಬದ ಹಿಂದಿನ ರಾತ್ರಿ ಆತನ ಮನೆಯ ಬಳಿ ಮಗುವೊಂದು ಅಳುವುದು ಕೇಳಿಸಿ ಹೋಗಿ ನೋಡಿದಾಗ 20-25 ದಿನದ ಹೆಣ್ಣು ಮಗುವೊಂದನ್ನು ಯಾರೋ ಬಿಟ್ಟು ಹೋಗಿದ್ದರು. ಸದ್ಯಕ್ಕೆ ಆ ಮಗು ಆತನ ವಶದಲ್ಲೇ ಸುರಕ್ಷಿತವಾಗಿದೆ.

## ಪದಾಧಿಕಾರಿಗಳ ಆಯ್ಕೆ

ಹುಲಿಗರಡಿ: ಇಲ್ಲಿನ ಪ್ರಗತಿ ಮಹಿಳಾ ಮಂಡಳಿಯ ಪದಾಧಿಕಾರಿಗಳು: ಹೆಚ್. ಎಸ್. ವಿಜಯ (ಅಧ್ಯಕ್ಷೆ), ಬಿ. ಯಶೋದ (ಉಪಾಧ್ಯಕ್ಷೆ), ಎನ್.ವಿ.ಶ್ರೀಮತಿ (ಕಾರ್ಯದರ್ಶಿ). ಎಲ್.ವಿ.ವಾಣಿ, (ಸಹಕಾರ್ಯದರ್ಶಿ). ಹೆಚ್.ಎಸ್.ಸೀತಾಲಕ್ಷ್ಮಿ (ಖಜಾಂಚಿ)

## "ಹಿರೀಕೆರೆಯ ಹೂಳೆತ್ತುವುದು ದುಸ್ಸಾಧ್ಯ"

(ಮೂರನೇ ಪುಟದಿಂದ)

ನೀವುಗಳು ಕೇಳಿರುವಂತೆ ಕೆರೆಯಲ್ಲಿರುವ ಹೂಳನ್ನು ತೆಗೆಯುವುದು ಅಷ್ಟು ಸುಲಭದ ಕೆಲಸವಲ್ಲ. ಕೆರೆಯಲ್ಲಿರುವ ನೀರನ್ನು ಖಾಲಿ ಮಾಡಿ ಅಂಗಳವನ್ನು ಒಣಗಿಸಿ ಹೂಳನ್ನು ತೆಗೆಯಬೇಕಾಗುತ್ತದೆ. ಈ ಕೆಲಸಕ್ಕೆ ದೊಡ್ಡ ಯಂತ್ರಗಳಿಲ್ಲವಾದ್ದರಿಂದ ಜನಬಲದಿಂದಲೇ ತೆಗೆಯಬೇಕಾಗುತ್ತದೆ. ಹೂಳನ್ನು ತೆಗೆಯುವಾಗ ಟ್ರಾಕ್ಟರ್ ನಿಲ್ಲಿಸಿಕೊಂಡು ಹೂಳಿನ ಮಣ್ಣನ್ನು ಅದರಲ್ಲಿ ಹಾಕಿಕೊಂಡು ದೂರ ಸಾಗಿಸಬೇಕಾಗುತ್ತದೆ. ಈ ಎಲ್ಲ ಕೆಲಸಕ್ಕೆ ಸುಮಾರು 10-15 ದಿನ ಬೇಕಾಗುತ್ತದೆ. ಹೂಳನ್ನು ತೆಗೆಯುವ ಸಮಯದಲ್ಲಿ ಊರಿನ ನೀರಿನ ಸರಬರಾಜಿಗೆ ಬೇರೆ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕಾಗುತ್ತದೆ. ಈ ಕೆಲಸ ಕೈಗೆತ್ತಿಕೊಳ್ಳುವುದಾದಲ್ಲಿ ಕೊಪ್ಪದಲ್ಲಿನ ನಮ್ಮ ಸಹಾಯಕ ಕಾರ್ಯಪಾಲಕ ಅಭಿಯಂತರವರ ಸಲಹೆಯನ್ನು ಪಡೆಯಬಹುದು ಮತ್ತು ಇದರ ಬಗ್ಗೆ ಅವರಿಗೆ ತಿಳುವಳಿಕೆ ನೀಡಲಾಗಿದೆ."

ಇತ್ತ ಕೆರೆ ಒಡೆದು ಬಿಡುವುದನ್ನು ಪುರಸಭೆ ಒಪ್ಪಲು ಸಿದ್ಧವಿರಲಿಲ್ಲ. ಹರಿಹರಪುರ ಹೊಳೆಯಲ್ಲಿ 60 ಅಶ್ವಶಕ್ತಿಯ ಪಂಪ್‌ಸೆಟ್ ಅಳವಡಿಕೆ ಮತ್ತು ಕೊಪ್ಪದಲ್ಲಿ ಈಗಿರುವ 50 ಸಾವಿರ ಗ್ಯಾಲನ್ ನೀರು ಶೇಖರಣಾ ಟ್ಯಾಂಕಿನ ಜೊತೆಗೆ ಇನ್ನೊಂದು 50 ಸಾವಿರ ಗ್ಯಾಲನ್ ಟಾಂಕ್ ಕಟ್ಟುವುದು-ಇವುಗಳಿಗಾಗಿ ಯೋಜನೆಯೊಂದನ್ನು ಪುರಸಭೆ ತಯಾರಿಸಿ ಕಳಿಸಿದ್ದು, ಇದಕ್ಕೆ ಸರ್ಕಾರದಿಂದ ಹಣದ ಮಂಜೂರಾತಿ ಬಂದರೆ ಯೋಜನೆ ತಕ್ಷಣ ಮಂಜೂರಾಗುತ್ತದೆ. ಊರಿನ ಮುಖಂಡರು ಪ್ರಯತ್ನ ಪಟ್ಟರೆ ಇದು ಈ ವರ್ಷವೇ ಆಗುತ್ತದೆ.

ಇದು ಆದರೆ ಆಗ ಹರಿಹರಪುರದಿಂದ ದಿನದ 24 ಗಂಟೆಯೂ ನೀರು ಹರಿದು ಬರುವಂತೆ ಮಾಡಲು ಸಾಧ್ಯ. ಆಗ ಹಿರೀಕೆರೆಯ ನೀರು ಒಂದು ವರ್ಷ ಇಲ್ಲದಿದ್ದರೂ ನೀರು ಸರಬರಾಜಿಗೆ ಧಕ್ಕೆಯಿಲ್ಲ. ಆಗ ಬೇಕಾದರೆ ಕೆರೆ ಒಡೆಯಲು ಪುರಸಭೆ ಒಪ್ಪುತ್ತದೆ.

ಈ ಎಲ್ಲ ಕಾರಣಗಳಿಂದಾಗಿ ಸದ್ಯಕ್ಕೆ ಹೂಳೆತ್ತುವ ಶ್ರಮದಾನ ಯೋಜನೆ ಕೈ ಬಿಡುವುದು ಸೂಕ್ತವಾಗಿದ್ದು, ಮೇಲ್ಕಂಡ ಯೋಜನೆ ಕಾರ್ಯಗತವಾದ ಮೇಲೆ ಈ ಕೆಲಸವನ್ನು ಕಂಟ್ರಾಕ್ಟ್ ಮೂಲಕವಾಗಲೀ, ಶ್ರಮದಾನದ ಮೂಲಕವಾಗಲೀ ಮಾಡಬಹುದೆಂಬುದು ಪುರಸಭೆಯ ಅಭಿಪ್ರಾಯ.

ಈ ವಿಷಯದಲ್ಲಿ ಉತ್ಸಾಹ ತೋರುವ ಮೂಲಕ ಊರಿನ ಸಮಸ್ಯೆಯ ಬಗ್ಗೆ ಕಳಕಳಿ ತೋರಿಸಿದ ಎಲ್ಲರಿಗೂ ಮೆಚ್ಚುಗೆ ಸೂಚಿಸಿ, ಈ ವಿಷಯವನ್ನು ಬರ್ಖಾಸ್ತುಗೊಳಿಸುತ್ತೇವೆ.

(ಈ ಮಧ್ಯೆ, ಹರಿಹರಪುರ ಹೊಳೆಯ ಪಂಪ್ ಹೌಸ್‌ನಲ್ಲಿ 'ಫಿಲ್ಟ್ರೇಶನ್' ವ್ಯವಸ್ಥೆ ಈವರೆಗೆ ಕೆಟ್ಟಿದ್ದು, ಇದರಿಂದ ನೀರೆತ್ತುವ ಕೊಳವೆ ಆಗಾಗ ಕಟ್ಟಿಕೊಳ್ಳುವ ಅಪಾಯ ಇರುತ್ತಿತ್ತು. ಫಿಲ್ಟ್ರೇಶನ್ ರಿಪೇರಿಯನ್ನು ಕೈಗೆತ್ತಿಕೊಂಡಿರುವ ನಗರ ನೀರು ಸರಬರಾಜು ಮಂಡಳಿಯ ಚಿಕ್ಕಮಗಳೂರು ಉಪವಿಭಾಗ ಏ. 3 ರಿಂದ ಕೆಲಸ ಆರಂಭಿಸಲಿದೆ. ಇದರಿಂದ ನೀರು ಸರಬರಾಜು ವ್ಯವಸ್ಥೆಯ ದಕ್ಷತೆ ಹೆಚ್ಚಲು ಸಹಾಯಕವಾಗುತ್ತದೆ ಎನ್ನಲಾಗಿದೆ.)

## ಗೋವಿಂದ ಗೌಡರ ಗಮನಕ್ಕಾಗಿ ಕೆಲವು ಸಂಗತಿಗಳು

(ಮೂರನೇ ಪುಟದಿಂದ)

ಈ ದಿಕ್ಕಿನಲ್ಲಿ ಗುಂಡೂರಾವ್ ಸರ್ಕಾರದ ಕಡೇ ದಿನಗಳಲ್ಲಿ ಒಂದು ಯೋಜನೆ ರೂಪಿತವಾಗಿತ್ತೆಂದು ನೆನಪು (ಅಥವಾ **ಯೋಜನೆ ಮಾತ್ರ?**) ಒಂದೊಂದು ಗ್ರಾಮದಲ್ಲಿ ಒಬ್ಬೊಬ್ಬ ಸ್ಥಳೀಯ ವ್ಯಕ್ತಿಗೆ ಬೋರ್‌ವೆಲ್ ರಿಪೇರಿಯ ಬಗ್ಗೆ ಪ್ರಾಥಮಿಕ ತರಬೇತಿ ಕೊಟ್ಟು, ಅತ್ಯಗತ್ಯವಾದ ಕೆಲವು ಉಪಕರಣಗಳನ್ನು ಒದಗಿಸಿ ಕೊಟ್ಟು, ಅವರಿಗೆ ಸೂಕ್ತ ಗೌರವಧನದೊಂದಿಗೆ ಆಯಾ ಗ್ರಾಮದ ಬೋರ್‌ವೆಲ್ ರಿಪೇರಿಯ ಜವಾಬ್ದಾರಿ ವಹಿಸುವುದು, ತೀವ್ರವಾದ ಸಮಸ್ಯೆಯಿದ್ದಾಗ ಮಾತ್ರ ಇಲಾಖೆಯ ತಜ್ಞ ಮೆಕಾನಿಕ್ ಭೇಟಿ ಕೊಡುವುದು—ಇದು ಆ ಯೋಜನೆ. ಇದನ್ನು ಈಗ ಕಾರ್ಯಗತಗೊಳಿಸುವುದು ಬಹಳ ಉಪಯುಕ್ತ.

ನಮ್ಮ ಈ ಭಾಗದಲ್ಲೆಲ್ಲೂ ಅಗ್ನಿ ಶಾಮಕ ದಳವಿಲ್ಲದೆ, ಪ್ರತಿವರ್ಷ ಬೆಂಕಿ ಅನಾಹುತಗಳಲ್ಲಿ ಅಮೂಲ್ಯವಾದ ಎಷ್ಟೋ ಆಸ್ತಿ-ಪಾಸ್ತಿ-ಜೀವ ಉಳಿಸಬಹುದಾದುದು ಉಳಿಸಲಾಗದೆ ಹೋಗುತ್ತಿದೆ. ಈ ಕ್ಷೇತ್ರದ ಮೂರೂ ತಾ|| ಗಳು ಮತ್ತು ತೀರ್ಥಳ್ಳಿ, ಆಗುಂಬೆಯೂ ಸೇರಿದಂತೆ ಕೇಂದ್ರ ಸ್ಥಳವೊಂದರಲ್ಲಿ (ಬಹುಮಾಡಿ ಕೊಪ್ಪದಲ್ಲಿ) ಅಗ್ನಿಶಾಮಕ ದಳದ ಘಟಕವೊಂದು ಸ್ಥಾಪನೆಯಾಗಬೇಕು.

ಇದಲ್ಲದೆ ಬೆಂಕಿ, ನೆರೆ ಮುಂತಾದುವುಗಳಿಂದ ತೀವ್ರ ನಷ್ಟಕ್ಕೊಳಗಾದವರಿಗೆ ತಾಲ್ಲೂಕು ಮಟ್ಟದಲ್ಲಿ ಸಿಗುವ ಪರಿಹಾರ ಹಾಗೂ ಹುಲಿ, ಕಾಡಾನೆಗಳಿಂದ ಆದ ನಷ್ಟಕ್ಕೆ ಡಿ. ಎಫ್. ಒ. ಮಟ್ಟದಲ್ಲಿ ಸಿಗುವ ಪರಿಹಾರ ಅತ್ಯಲ್ಪವಾಗಿದೆ. ಅದಕ್ಕಿಂತ ಮೇಲ್ಪಟ್ಟವರಿಗೆ ರಿಕಾರ್ಡ್ ಕಳಿಸಿ, ಇನ್ನೊಂದು ನೂರೈವತ್ತೋ ಇನ್ನೂರೋ ರೂ. ಹೆಚ್ಚಿಗೆ ಪಡೆಯುವಷ್ಟು ಸಾಮರ್ಥ್ಯ ಮತ್ತು ಸಮಯ ಹೆಚ್ಚು ಜನರಿಗೆ ಇರುವುದಿಲ್ಲ. ಆದ್ದರಿಂದ ಈ ಮಟ್ಟದಲ್ಲೇ ಸ್ವಲ್ಪ ಅರ್ಥಪೂರ್ಣವಾದ ಪರಿಹಾರ ಸಿಗುವಂತೆ ಈ ಪರಿಹಾರಗಳ ಮೊತ್ತವನ್ನು ಗಣನೀಯವಾಗಿ ಏರಿಸಬೇಕು ಮತ್ತು ಅದು ತ್ವರಿತವಾಗಿ ಸಿಗುವಂತೆಯೂ ಏರ್ಪಡಿಸಬೇಕು.

**ಪಾಲಿಟೆಕ್ನಿಕ್**

ಈ ಪ್ರದೇಶದಲ್ಲಿ ಒಂದು ಪಾಲಿಟೆಕ್ನಿಕ್‌ನ ಅವಶ್ಯಕತೆ ತುಂಬಾ ಇದೆ. "ವಿದ್ಯಾವಂತ ನಿರುದ್ಯೋಗಿ"ಗಳಾಗುವ ಎಷ್ಟೋ ಜನರಿಗೆ, ಮುಖ್ಯವಾಗಿ ಬಡವರಿಗೆ, ಇದರಿಂದ ಅಪಾರವಾದ ಲಾಭವಾಗುತ್ತದೆ. ಈ ಬಗ್ಗೆ ಹಿಂದೆ ಬೇಗಾನೆ ರಾಮಯ್ಯನವರೇ ಸಲ್ಪ ಯೋಚನೆ ಮಾಡಿದ್ದರು. ಗೋವಿಂದ ಗೌಡರೂ ಸಹ ಕಳೆದ ವರ್ಷವೇ ಈ ಬಗ್ಗೆ ಸ್ವಲ್ಪ ಚರ್ಚಿಸಿದ್ದರು. ಅವರೀಗ ತಮ್ಮೆಲ್ಲ ಪ್ರಭಾವ ಉಪಯೋಗಿಸಿ ಕ್ಷೇತ್ರಕ್ಕೊಂದು ಪಾಲಿಟೆಕ್ನಿಕ್ ತರಬೇಕು.

ಶೃಂಗೇರಿಗೆ ಐ. ಟಿ. ಐ. ಮಂಜೂರಾಗುವ ಬಗ್ಗೆ ವಿಧಿ ವಿಧಾನಗಳೆಲ್ಲ ನಡೆಯುತ್ತಿದ್ದು, ಈಗ 'ಅದು ರದ್ದಾಯಿತಂತೆ' ಎಂಬ ಗುಲ್ಲು ಎದ್ದಿದೆ. ಹಾಗಾಗಲು ಬಿಡಬಾರದು. ಶೃಂಗೇರಿಗೆ ಐ. ಟಿ. ಐ. ತರಲೇಬೇಕು.

ಜೊತೆಗೆ ನ. ರಾ. ಪುರದಲ್ಲಿ ಒಂದು ಪ್ರಥಮ ದರ್ಜೆ ಕಾಲೇಜಿನ ಬೇಡಿಕೆಯಿದೆ. ಸದ್ಯಕ್ಕೆ ಸೈನ್ಸ್ ಮತ್ತು ಆರ್ಟ್ಸ್ ವಿಭಾಗಗಳೆರಡೇ ಸಾಕೆಂಬ ಅಭಿಪ್ರಾಯವಿದ್ದಂತಿದೆ. ಇದನ್ನು ಕೂಲಂಕಷವಾಗಿ ಪರಿಶೀಲಿಸಿ ಊರಿನ ಜನರ ಅಭಿಪ್ರಾಯಕ್ಕೆ ತಕ್ಕಂತೆ ಮಂಜೂರು ಮಾಡಿಸುವ ಪ್ರಯತ್ನ ಮಾಡಬಹುದು.

ಆದರೆ ನಿರುದ್ಯೋಗಿಗಳ ದಂಡನ್ನೇ ಹುಟ್ಟಿ ಹಾಕುತ್ತಿರುವ ಇಂಥ ಮತ್ತಷ್ಟು ಪ್ರ. ದ. ಕಾಲೇಜುಗಳನ್ನು ಸ್ಥಾಪಿಸುವ ಬದಲು ಪಾಲಟೆಕ್ನಿಕ್‌ನ್ನೇ ಇಲ್ಲಿ ಸ್ಥಾಪಿಸಬಹುದು. ಇದರಿಂದ ಶೃಂಗೇರಿ, ತೀರ್ಥಳ್ಳಿ ತಾ|| ವಿದ್ಯಾರ್ಥಿಗಳಿಗೆ ಸ್ವಲ್ಪ ಅಸೌಕರ್ಯವಾಗ ಬಹುದು ಅಷ್ಟೆ. ಹೀಗಾದಲ್ಲಿ ಕೊಪ್ಪದ ಪ್ರ. ದ. ಕಾಲೇಜಿಗೆ ವಿಜ್ಞಾನ ವಿಭಾಗವನ್ನು ಕೊಟ್ಟು ಪೂರ್ತಿ ಸುಸಜ್ಜಿಗೊಳಿಸಬೇಕು.

ನ. ರಾ. ಪುರದವರ ಇನ್ನೊಂದು ಮುಖ್ಯ ಬೇಡಿಕೆ ಚಿಕ್ಕಮಗಳೂರಿಗೆ ನೇರ ರಸ್ತೆ ಸೌಕರ್ಯ. ಇದೊಂದು ದುಬಾರಿ ಯೋಜನೆಯಾಗಿರಬಹುದು. ಆದರೆ ಯಾವ ಕಾಲಕ್ಕಾದರೂ ಆಗಲೇ ಬೇಕಾದಂಥದು. ಆದ್ದರಿಂದ ಈಗಿನಿಂದಲೇ ಈ ಯೋಜನೆ ಆಗುವಂತೆ ಪ್ರಯತ್ನ ನಡೆಸಬೇಕು.

ಈ ತಾಲ್ಲೂಕಿನ ಹಲವು ಭಾಗಗಳಲ್ಲಿ ಈಚಿನ ವರ್ಷಗಳಲ್ಲಿ ಕಾಡಾನೆಗಳ ಹಾವಳಿ ಮಿತಿ ಮೀರಿದೆ. ಇದಕ್ಕೆ ಶಾಶ್ವತವಾದ ಪರಿಹಾರವನ್ನು ದೊರಕಿಸಬೇಕು.

‡‡



ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿ.ಮನೆ ನಾಗರಾಜ್; ಅಚ್ಚು: ದೀವಟಿಗೆ ಅಚ್ಚು ಕೂಟ, ಕೊಪ್ಪ.